**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು 8 ನೇ ನ್ಯಾಯಾಲಯ**

**ಬೆಳಗಾವಿ**

**ಉಪಸ್ಥಿತರು: ಶ್ರೀಮತಿ. ಭಾಗ್ಯಲಕ್ಷ್ಮಿ.**

**ಬಿ.ಕಾಂ. ಎಲ್. ಎಲ್. ಬಿ.,**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**8 ನೇ ನ್ಯಾಯಾಲಯ, ಬೆಳಗಾವಿ.**

**ಸಿ. ಸಿ. ನಂ.363/2017**

**ದಿನಾಂಕ : 07.03.2020**

**ಫಿರ್ಯಾದುದಾರ :** **ಶ್ರೀ ಮೊಹಮ್ಮದ ರಸೂಲ್ ಅಬ್ದುಲ್ ಕರೀಮ್ ಮುಲ್ಲಾ,**

ವಯಸ್ಸು : ಮೇಜರ, ವೃತ್ತಿ: ವ್ಯವಹಾರ,

ವಿಳಾಸ : 4478, ಚವಾಟ ಗಲ್ಲಿ, ಬೆಳಗಾವಿ, ಕರ್ನಾಟಕ.

**(ಪ್ರತಿನಿಧಿಸುವವರು : ಶ್ರೀ. ಎಸ್. ಪಿ. ಕುಲಕರ್ಣಿ ವಕೀಲರು)**

**-ವಿರುದ್ಧ-**

**ಆರೋಪಿತರು :** **1. ಸನದಿ ರಿಯಾಲಿಟಿ ಪ್ರೊಪ್ರಾಟರಿಸ್ ಪ್ರೈ ಲಿ॥**

**2. ಶ್ರೀ ಅನ್ಸಾರ ಸನದಿ,**

ವಯಸ್ಸು: ಮೇಜರ, ವೃತ್ತಿ: ವ್ಯವಹಾರ,

**3. ಶ್ರೀ ಜಾಫರ ಸನದಿ,**

ವಯಸ್ಸು : ಮೇಜರ್, ವೃತ್ತಿ: ವ್ಯವಹಾರ,

1 ರಿಂದ 3 ನೇ ಆರೋಪಿತರ ವಿಳಾಸ : ಸನದಿ
ರಿಯಾಲಿಟಿ ಪ್ರೊಪ್ರಾಟರಿಸ್ ಪ್ರೈ ಲಿ॥, ಎಫ್ 06,
ಹಾರ್ಡವೇರ್ ಸೆಂಚ್ಯುರಿಯನ್ ಮಾಲ್, ನೇರುಲ್,
ಸೆಕ್ಟಾರ ಸಂಖ್ಯೆ: 19 ಎ, ಸಾವುಡ್(ಇ), ನವಿ
ಮುಂಬೈ, 400706.

**(ಪ್ರತಿನಿಧಿಸುವವರು : ಶ್ರೀ ಎಸ್. ಕೆ. ಪಾಟೀಲ್ ವಕೀಲರು)**

| | | |
|---|---|---|
| ಫಿರ್ಯಾದನ್ನು ದಾಖಲು ಮಾಡಿದ ದಿನಾಂಕ | : | **12.01.2016** |
| ಆರೋಪಿಯ ಆಪಾದನೆ | : | ಆಪಾದನೆಯನ್ನು ಒಪ್ಪಿಕೊಂಡಿರುವುದಿಲ್ಲ |
| ಅಂತಿಮ ಆದೇಶ | : | **1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಸಿದ್ದದೋಷಿಗಳು.** |
| ಆದೇಶದ ದಿನಾಂಕ | : | **07.03.2020.** |

**-:ತೀರ್ಪು:-**

ಫಿರ್ಯಾದಿಯು ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ರ ಅಡಿಯಲ್ಲಿ ಖಾಸಗಿ ಫಿರ್ಯಾದನ್ನು ಆರೋಪಿತನ ವಿರುದ್ದ ದಾಖಲು ಮಾಡಿ, ಆರೋಪಿತನು

ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾರೆಂದು ಆರೋಪಿಸಿರುತ್ತಾರೆ.

**2. ದೂರಿನ ಸಂಗತಿಗಳು ಸಂಕ್ಷಿಪ್ತವಾಗಿ ಕೆಳಕಂಡಂತೆ ಇರುತ್ತದೆ:-**

ಫಿರ್ಯಾದಿಯ ಪ್ರಕಾರ, 1 ನೇ ಆರೋಪಿ ಸ್ವತಃ ಒಂದು ವ್ಯವಹಾರಸ್ಥ ಸಂಸ್ಥೆಯಾಗಿದ್ದು, ಮೊದಲು **'ಸನದಿ ಎಂಟರಪ್ರೈಸಸ್ ಪ್ರೈವೆಟ್ ಲಿಮಿಟೆಡ್'** ಎಂಬ ಹೆಸರಿನಲ್ಲಿ ಕಛೇರಿ ಸಂಖ್ಯೆ: 20, ನೆಲ ಮಹಡಿ, ನೀಲಕಂಠ ಅರ್ಪಾಟಮೆಂಟ್, ಸೆಕ್ಟಾರ 3, ನಿವೇಶನ ಸಂಖ್ಯೆ: 9, ಘಾನಸೂಳಿ (W) , ಹೊಸ ಮುಂಬೈನಲ್ಲಿದ್ದು, 2 ಮತ್ತು 3 ನೇ ಆರೋಪಿತರು ಸದರಿ 1 ನೇ ಆರೋಪಿ ಕಂಪನಿಯ ದಿನನಿತ್ಯದ ಚಟುವಟಿಕೆಗಳನ್ನು ನಡೆಸುತ್ತಿದ್ದು, ನಂತರ 1 ನೇ ಆರೋಪಿ ಕಂಪನಿಯು ಮೊದಲಿನ ಸ್ಥಳದಲ್ಲಿದ್ದ ತನ್ನ ಕಛೇರಿಯನ್ನು ಮುಚ್ಚಿ, ಪ್ರಸ್ತುತ ವಿಳಾಸಕ್ಕೆ ತನ್ನ ಕಛೇರಿಯನ್ನು ಸ್ಥಳಾಂತರಿಸಿದ್ದು, 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಮಾಡುವಂತಹ ಕಾರ್ಯಗಳಿಗೆ ದಿನ ನಿತ್ಯದ ವ್ಯವಹಾರಗಳಿಗೆ ಅವರುಗಳು ಭಾಧ್ಯಸ್ಥರಾಗಿರುತ್ತಾರೆ.

1 ನೇ ಆರೋಪಿ ಕಂಪನಿಯು 2 ಮತ್ತು 3 ನೇ ಆರೋಪಿತರು ಮಾಡುತ್ತಿರುವಂತಹ ಕಾರ್ಯ ಚಟುವಟಿಕೆಗಳಿಂದ ನಡೆಸಲ್ಪಡುತ್ತಿದ್ದು, ಫಿರ್ಯಾದಿಯು 1 ನೇ ಆರೋಪಿ ಕಂಪನಿಯಲ್ಲಿ ಬಂಡವಾಳವನ್ನು ಹೂಡಿಕೆ ಮಾಡಿದ್ದಲ್ಲಿ ಪ್ರತಿ ತಿಂಗಳು ಸಂಬಳವನ್ನು ಪಡೆಯಬಹುದು ಎಂದು 2 ಮತ್ತು 3 ನೇ ಆರೋಪಿತರು ಫಿರ್ಯಾದಿಗೆ ಹೇಳಿದ್ದು, 2 ಮತ್ತು 3 ನೇ ಆರೋಪಿತರ ಮಾತುಗಳನ್ನು ನಂಬಿ ಫಿರ್ಯಾದಿಯು ರೂ. 1,25,000/- ಹಣವನ್ನು

1 ನೇ ಆರೋಪಿ ಕಂಪನಿಯಲ್ಲಿ 2 ಮತ್ತು 3 ನೇ ಆರೋಪಿತರ ಮೂಲಕ ಬಂಡವಾಳವನ್ನು ಹೂಡಿಕೆ ಮಾಡಿದ್ದು, ಆ ಸಂಬಂಧ 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ದಿನಾಂಕ : 22.06.2012 ರಂದು ಮುಂಬೈನಲ್ಲಿ 'ವಚನ ಬಂಧ ಮನವಿ' (Memorandum of Understanding) ವನ್ನು ಮಾಡಿಕೊಟ್ಟಿರುತ್ತಾರೆ. ಸದರಿ 'ವಚನ ಬಂಧ ಮನವಿ' (Memorandum of Understanding) ಗೆ ಅನುಗುಣವಾಗಿ ಆರೋಪಿತರು ಮೊದಲನೇ ಶೆಡ್ಯೂಲಗನುಗುಣವಾಗಿ ಪ್ರತಿ ತಿಂಗಳು ರೂ.15,000/- ಗಳಂತೆ ಮುಂದಿನ 12 ತಿಂಗಳವರೆಗೆ 'ವಚನ ಬಂಧ ಮನವಿ' (Memorandum of Understanding) ವನ್ನು ಮಾಡಿದ ದಿನಾಂಕದಿಂದ ಮುಂಗಡ ಚೆಕ್ಕಿನ ಮೂಲಕ ಅಥವಾ ನಗದಿನ ಮೂಲಕ ಹಣವನ್ನು ಕೊಡಬೇಕಿದ್ದು, ಸದರಿ 'ವಚನ ಬಂಧ ಮನವಿ' (Memorandum of Understanding) ನಲ್ಲಿ ಒಪ್ಪಿಕೊಂಡಂತೆ ಸಂಬಳವನ್ನು ಕೊಟ್ಟಿರುವುದಿಲ್ಲ. ಹಲವಾರು ಭಾರಿ ಬಂಡವಾಳ ಹೂಡಿಕೆ ಮಾಡಿದಂತಹ ಹಣವನ್ನು ಫಿರ್ಯಾದಿಯು ವಾಪಾಸ್ಸು ಮಾಡುವಂತೆ ಕೇಳಿದ್ದು, 3 ನೇ ಆರೋಪಿಯು 1 ನೇ ಆರೋಪಿ ಕಂಪನಿಯ ದಿನನಿತ್ಯದ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ ಕಾರಣ, ಆಕ್ಸಿಸ್ ಬ್ಯಾಂಕ್, ವಾಸಿ II ಎ ಪಿ ಎಮ್ ಸಿ, ಎಂ II, ಮುಂಬೈನ ಚೆಕ್ಕನ್ನು 1 ಮತ್ತು 3 ನೇ ಆರೋಪಿತರ ಪರವಾಗಿ ಕಾನೂನು ಬದ್ಧ ಭಾಧ್ಯಸ್ಥತೆಯಿಂದ 3 ನೇ ಆರೋಪಿಯು ಆತನ ಬ್ಯಾಂಕ್ ಖಾತೆಯ ನಾಲ್ಕು ಚೆಕ್ಕುಗಳನ್ನು, ದಿನಾಂಕ: 05.11.2015 ರ ಚೆಕ್ ಸಂಖ್ಯೆ: 022704 ರ ರೂ.1,50,000/- ಗಳಿಗೆ, ದಿನಾಂಕ: 05.10.2015 ರ ಚೆಕ್ಕ ಸಂಖ್ಯೆ:035452 ರ ರೂ.

20,000/- ಗಳಿಗೆ, ಚೆಕ್ಕ ಸಂಖ್ಯೆ: 035453 ರೂ. 20,000/- ಗಳಿಗೆ, ಚೆಕ್ಕ ಸಂಖ್ಯೆ: 035454 ರೂ. 10,000/- ಗಳಿಗೆ ಒಟ್ಟು ನಾಲ್ಕು ಚೆಕ್ಕಗಳನ್ನು ನೀಡಿದ್ದು, ಸದರಿ ನಾಲ್ಕು ಚೆಕ್ಕಗಳನ್ನು ಫಿರ್ಯಾದಿಯು ಆತನ ಬ್ಯಾಂಕ ಖಾತೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ದಿನಾಂಕ : 06.11.2015 ರಂದು ಮತ್ತು ದಿನಾಂಕ: 10.05.2015 ರಂದು ಸದರಿ ನಾಲ್ಕು ಚೆಕ್ಕುಗಳು ಆರೋಪಿಯ ಖಾತೆಯು **"Payment Stopped by Drawer", "Account Closed" ಮತ್ತು "ಸಾಕಷ್ಟು ಹಣ ಇರುವುದಿಲ್ಲ"** ಎಂದು ಅನಾಧರಣಗೊಂಡಿರುತ್ತವೆ ಎಂಬ ಷರದೊಂದಿಗೆ ನಾಲ್ಕು ಬ್ಯಾಂಕ್ ಹಿಂಬರಗಳೊಂದಿಗೆ ವಾಪಾಸ್ಸು ಕೊಟ್ಟಿರುತ್ತಾರೆ. ದಿನಾಂಕ : 05.12.2015 ರಂದು 1 ರಿಂದ 3 ನೇ ಆರೋಪಿತರಿಗೆ ಫಿರ್ಯಾದಿಯು ಆತನ ವಕೀಲರ ಮೂಲಕ ಲಿಖಿತ ನೋಟಿಸ್ಸಗಳನ್ನು ನೀಡಿ, ನಾಲ್ಕು ಚೆಕ್ಕುಗಳು ಅನಾಧರಣಗೊಂಡ ಸಂಗತಿಯನ್ನು ತಿಳಿಸಿದ್ದಲ್ಲದೆ, ನಾಲ್ಕು ಚೆಕ್ಕುಗಳಲ್ಲಿ ನಮೂದು ಮಾಡಿರುವ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದ್ದರೂ 1 ರಿಂದ 3 ನೇ ಆರೋಪಿತರು ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಸದರಿ ಲಿಖಿತ ನೋಟಿಸ್ಸುಗಳು 1 ರಿಂದ 3 ನೇ ಆರೋಪಿತರಿಗೆ ಜಾರಿಯಾಗಿದ್ದು, ನೋಟಿಸ್ಸು ಜಾರಿಯಾದ 15 ದಿನಗಳಲ್ಲಿ ಫಿರ್ಯಾದಿಗೆ ಚೆಕ್ಕಿನ ಬಾಬ್ತು ಹಣವನ್ನು ಪಾವತಿ ಮಾಡಲು ತಪ್ಪಿರುತ್ತಾರೆ. ಆದ್ದರಿಂದ ಖಾಸಗಿ ದೂರನ್ನು ಫಿರ್ಯಾದಿಯು 1 ರಿಂದ 3 ನೇ ಆರೋಪಿತರ ವಿರುದ್ಧ ದಾಖಲು ಮಾಡಿ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆರೋಪಿಸಿರುತ್ತಾರೆ.

3. ಪ್ರಸ್ತುತ ಫಿರ್ಯಾದು ಪ್ರಥಮವಾಗಿ ಮಾನ್ಯ ಮೂರನೇ ಜೆ.ಎಮ್.ಎಫ್.ಸಿ. ನ್ಯಾಯಾಲಯದಲ್ಲಿ ದಾಖಲಾಗಿದ್ದು, ಸದರಿ ನ್ಯಾಯಾಲಯವು ಫಿರ್ಯಾದಿನ ಸಂಜ್ಞೆಯತೆಯನ್ನು ತೆಗೆದುಕೊಂಡು, ಖಾಸಗಿ ಫಿರ್ಯಾದು ಸಂಖ್ಯೆ. 13/2016 ರಲ್ಲಿ ಪ್ರಕರಣವನ್ನು ದಾಖಲು ಪಡಿಸಿಕೊಂಡಿದ್ದು, ನಂತರ ದಿನಾಂಕ: 28.08.2017 ರ ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಇವರ ಆದೇಶದಂತೆ ಈ ನ್ಯಾಯಾಲಯಕ್ಕೆ ಪ್ರಕರಣವು ವರ್ಗಾವಣೆಗೊಂಡಿರುತ್ತದೆ.

4. ಫಿರ್ಯಾದು ದಾಖಲಾದ ನಂತರ ಫಿರ್ಯಾದುದಾರರ ಪ್ರಮಾಣ ಪೂರ್ವಕ ಹೇಳಿಕೆಯನ್ನು ದಾಖಲಿಸಿಕೊಂಡು, ಫಿರ್ಯಾಧಿಗೆ ಸಂಬಂಧಿಸಿದ ಬ್ಯಾಂಕ ಚೆಕ್ಕು, ಬ್ಯಾಂಕಿನ ಹಿಂಬರಹ, ಲಿಖಿತ ತಿಳುವಳಿಕೆ ಪತ್ರ ಮತ್ತು ಇತರೆ ದಸ್ತಾವೇಜುಗಳನ್ನು ಪರಿಶೀಲಿಸಿ ನನ್ನ ಪೂರ್ವಾಧಿಕಾರಿಗಳು 1 ರಿಂದ 3 ನೇ ಆರೋಪಿತರಿಗೆ ಸಮನ್ಸ ಅನ್ನು ಜಾರಿ ಮಾಡಿರುತ್ತಾರೆ.

5. ಫಿರ್ಯಾದಿಯಾದ **ಶ್ರೀ ಮೊಹಮ್ಮದ ರಸೂಲ್ ಅಬ್ದುಲ್ ಕರೀಮ್ ಮುಲ್ಲಾ** ಇವರು ತಮ್ಮ ಫಿರ್ಯಾದಿನಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸುವ ಸಲುವಾಗಿ ದಿನಾಂಕ : 20.11.2017 ರಂದು ತಮ್ಮನ್ನು ತಾವು ಪಿ.ಡಬ್ಲೂ.1 ಎಂದು ವಿಚಾರಣೆಗೆ ಒಳಪಟ್ಟಿದ್ದು, ನಿಶಾನೆ.ಪಿ-1 ರಿಂದ 16 (ಸಿ) ರವರೆಗೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

(i). ನಾಲ್ಕು ಚೆಕ್ಕುಗಳು ನಿಶಾನೆ. ಪಿ-1 ರಿಂದ ನಿಶಾನೆ ಪಿ-4.

(ii). ನಾಲ್ಕು ಚೆಕ್ಕುಗಳ ಮೇಲಿರುವ 3 ನೇ ಆರೋಪಿತನ ಸಹಿಗಳು ನಿಶಾನೆ. ಪಿ-1(ಎ) ರಿಂದ ನಿಶಾನೆ ಪಿ-4(ಎ).

(iii) ನಾಲ್ಕು ಬ್ಯಾಂಕ ಹಿಂಬರಹಗಳು ನಿಶಾನೆ.ಪಿ-5 ರಿಂದ ನಿಶಾನೆ ಪಿ-8.

(iv). ಕಛೇರಿಯ ಲಿಖಿತ ನೋಟಿಸ್ಸಿನ ಪ್ರತಿ ನಿಶಾನೆ.ಪಿ-9.

(v). ಮೂರು ಅಂಚೆ ರಶೀದಿಗಳು ನಿಶಾನೆ .ಪಿ-10 ರಿಂದ ನಿಶಾನೆ ಪಿ-12.

(vi). ಮೂರು ಅಂಚೆ ಸ್ವೀಕೃತಿಗಳು ನಿಶಾನೆ ಪಿ-13 ರಿಂದ ನಿಶಾನೆ ಪಿ-15.

(vii). ವಚನ ಬಂಧ ಮನವಿ ನಿಶಾನೆ ಪಿ-16.

(viii) ವಚನ ಬಂಧ ಮನವಿ ಪತ್ರದ ಮೇಲಿರುವ ಸಹಿಗಳು ನಿಶಾನೆ ಪಿ-16(ಎ), 16 (ಬಿ) ಮತ್ತು ನಿ ಪಿ-16 (ಸಿ).

6. ಸಮನ್ಸ್ ಗೆ ಸ್ಪಂದಿಸಿದ 2 ನೇ ಆರೋಪಿಯು ದಿನಾಂಕ : 17.07.2018 ರಂದು ಮುಂಗಡ ಅರ್ಜಿಯನ್ನು ಸಲ್ಲಿಸಿಸುವುದರ ಮೂಲಕ **ಶ್ರೀ. ಎಸ್. ಎ. ಕಡಬಡೆ** ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಅವರು ಜಾಮೀನಿನ ಮೇಲೆ ಇರುತ್ತಾರೆ.

7. 2 ನೇ ಆರೋಪಿಗೆ ಫಿರ್ಯಾದಿನ ನಕಲುಗಳನ್ನು ಉಚಿತವಾಗಿ ಒದಗಿಸಿ ದಿನಾಂಕ : 17.07.2018 ರಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿ

ಆರೋಪಣೆಯನ್ನು ತಯಾರಿಸಿ, ಆರೋಪಿತನಿಗೆ ಓದಿ ಹೇಳಲಾಗಿ ಆರೋಪಿಯು ಆತನು ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿರುತ್ತಾರೆ.

8. ಸಮನ್ಸ್ ಗೆ ಸ್ಪಂದಿಸಿದ 3 ನೇ ಆರೋಪಿಯು ದಿನಾಂಕ : 29.08.2018 ರಂದು **ಶ್ರೀ. ಎಸ್. ಎಸ್. ಎಮ್.** ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ಆರೋಪಿಯು ಜಾಮೀನಿನ ಮೇಲೆ ಇರುತ್ತಾರೆ.

9. 3 ನೇ ಆರೋಪಿಗೆ ಫಿರ್ಯಾದಿನ ನಕಲುಗಳನ್ನು ಉಚಿತವಾಗಿ ಒದಗಿಸಿ ದಿನಾಂಕ : 29.08.2018 ರಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿ ಆರೋಪಣೆಯನ್ನು ತಯಾರಿಸಿ, 3 ನೇ ಆರೋಪಿಗೆ ಓದಿ ಹೇಳಲಾಗಿ ಆತನು ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿರುತ್ತಾರೆ.

10. ಫಿರ್ಯಾದಿಯ ಪರ ವಿಚಾರಣೆ ನಂತರ, ದಿನಾಂಕ: 10.12.2018 ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ 2 ನೇ ಮತ್ತು 3 ನೇ ಆರೋಪಿತರ ಹೇಳಿಕೆಯನ್ನು ಅಭಿಲೇಖಿಸಲಾಯಿತು. 2 ನೇ ಮತ್ತು 3 ನೇ ಆರೋಪಿತರು ಸದರಿ ಹೇಳಿಕೆಯಲ್ಲಿ ಅಭಿಲೇಖಿಸಲಾದ ವಿವರಗಳನ್ನು ಸಂಪೂರ್ಣವಾಗಿ **ನಿರಾಕರಣೆ ಮಾಡಿರುತ್ತಾರೆ.** ಹಾಗೂ 2 ನೇ ಮತ್ತು 3 ನೇ ಆರೋಪಿತರು ಅವರ ಪರವಾಗಿ ಪ್ರತಿರಕ್ಷ್ಯಾ ಸಾಕ್ಷ್ಯವಿರುವುದಾಗಿ ಹೇಳಿರುತ್ತಾರೆ.

11. ದಿನಾಂಕ: 22.09.2018 ರಂದು **ಶ್ರೀ ಎಸ್. ಕೆ. ಪಾಟೀಲ್** ವಕೀಲರು 2 ನೇ ಮತ್ತು 3 ನೇ ಆರೋಪಿತರ ಪರವಾಗಿ ವಕಾಲತ್ತ ನಾಮೆಯನ್ನು ಸಲ್ಲಿಸಿರುತ್ತಾರೆ.

12. ಫಿರ್ಯಾದಿ ಪರ ಹಾಗೂ ಆರೋಪಿ ಪರ ವಕೀಲರ ವಾದವನ್ನು ಕೇಳಿ ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ಫಿರ್ಯಾದಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ ಮೌಖಿಕ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಬಂದಿರುತ್ತವೆ.

(i). 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಕಾನೂನಾತ್ಮಕವಾಗಿ ಪಾವತಿಸಬೇಕಾದ ಹಣಕ್ಕಾಗಿ, 3 ನೇ ಆರೋಪಿಯು ಸದರಿ ಬಂಡವಾಳ ಹೂಡಿಕೆ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಫಿರ್ಯಾದಿಗೆ ದಿನಾಂಕ: **05.11.2015** ರಂದು **1,50,000/-** ಗಳಿಗೆ ಚೆಕ್ಕ್ ಸಂಖ್ಯೆ:022704, ದಿನಾಂಕ: 05.10.2015 ರಂದು ರೂ.20,000/- ಗಳಿಗೆ ಚೆಕ್ಕ ಸಂಖ್ಯೆ:035452, ಚೆಕ್ಕ ಸಂಖ್ಯೆ: 035453 ರೂ.20,000/- ಗಳಿಗೆ, ಚೆಕ್ಕ ಸಂಖ್ಯೆ: 035454 ರೂ. 10,000/- ಗಳಿಗೆ ಎಕ್ಸಿಸ್ ಬ್ಯಾಂಕ್, ವಾಸಿ ಎ.ಪಿ. ಎಮ್. ಸಿ|| ಎಸ್. ವಿ. ಎಮ್. ಎ. ಹೆಚ್, ನವಿ ಮುಂಬೈನ ನಾಲ್ಕು ಚೆಕ್ಕಗಳನ್ನು ನೀಡಿದ್ದು, ಸದರಿ ನಾಲ್ಕು ಚೆಕ್ಕಗಳನ್ನು ಫಿರ್ಯಾದಿಯು ಆತನ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ದಿನಾಂಕ : 06.11.2015 ಹಾಗೂ ದಿನಾಂಕ; 10.11.2015 ರಂದು ಬ್ಯಾಂಕಿನವರು ಆರೋಪಿಯ ಖಾತೆಯು

**"Payment Stopped by Drawer", "Account Closed" ಮತ್ತು "ಸಾಕಷ್ಟು ಹಣ ಇರುವುದಿಲ್ಲ"** ಎಂದು ಅನಾಧರಣಗೊಂಡಿರುತ್ತದೆ ಎಂಬ ಷರದೊಂದಿಗೆ ನಾಲ್ಕು ಚೆಕ್ಕುಗಳನ್ನು ವಾಪಾಸ್ಸು ಕೊಟ್ಟಿರುತ್ತಾರೆ. ದಿನಾಂಕ : 05.12.2015 ರಂದು 1 ರಿಂದ 3 ಆರೋಪಿತರಿಗೆ ಫಿರ್ಯಾದಿಯು ಆತನ ವಕೀಲರ ಮೂಲಕ ಲಿಖಿತ ನೋಟಿಸ್ಸಗಳನ್ನು ನೀಡಿ, ನಾಲ್ಕು ಚೆಕ್ಕುಗಳಲ್ಲಿ ಒಳಗೊಂಡಿರುವ ಹಣವನ್ನು ನೋಟಿಸ್ಸುಗಳು ಜಾರಿಯಾದ 15 ದಿನಗಳಲ್ಲಿ ಪಾವತಿಸುವಂತೆ ತಿಳಿಸಿದ್ದರೂ, 1 ರಿಂದ 3 ಆರೋಪಿತರು ನಾಲ್ಕು ಚೆಕ್ಕುಗಳ ಹಣವನ್ನು ತೀರುವಳಿ ಮಾಡದೇ ಇರುವುದರಿಂದ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ. 138 ರ ಅಡಿಯಲ್ಲಿ 1 ರಿಂದ 3 ನೇ ಆರೋಪಿತರು ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಎಂಬುದನ್ನು ಫಿರ್ಯಾದಿಯು ರುಜುವಾತು ಪಡಿಸುವರೆ ?

(ii) . ಮಾಡುವ ಆದೇಶ ಏನು ?

14. ಮೇಲಿನ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ : 1- ಸಕಾರಾತ್ಮಕವಾಗಿ.**

ಅಂಶ : 2- ಅಂತಿಮ ಆದೇಶದಂತೆ.

15. **ಅಂಶ 1 :-**

ಫಿರ್ಯಾದಿಯ ಪ್ರಕಾರ, 1 ನೇ ಆರೋಪಿ ಸ್ವತಃ ಒಂದು ವ್ಯವಹಾರಸ್ಥ ಸಂಸ್ಥೆಯಾಗಿದ್ದು, ಮೊದಲು **'ಸನದಿ ಎಂಟರಪ್ರೈಸಸ್ ಪ್ರೈವೆಟ್ ಲಿಮಿಟೆಡ್'** ಎಂಬ ಹೆಸರಿನಲ್ಲಿ ಕಛೇರಿ ಸಂಖ್ಯೆ: 20, ನೆಲ ಮಹಡಿ, ನೀಲಕಂಠ ಅರ್ಪಾಟಮೆಂಟ್, ಸೆಕ್ಟಾರ 3, ನಿವೇಶನ ಸಂಖ್ಯೆ: 9, ಘಾನಸೂಳಿ (W), ಹೊಸ ಮುಂಬೈನಲ್ಲಿದ್ದು, 2 ಮತ್ತು 3 ನೇ ಆರೋಪಿತರು ಸದರಿ 1 ನೇ ಆರೋಪಿ ಕಂಪನಿಯ ದಿನನಿತ್ಯದ ಚಟುವಟಿಕೆಗಳನ್ನು ನಡೆಸುತ್ತಿದ್ದು, ನಂತರ 1 ನೇ ಆರೋಪಿ ಕಂಪನಿಯು ಮೊದಲಿನ ಸ್ಥಳದಲ್ಲಿದ್ದ ತನ್ನ ಕಛೇರಿಯನ್ನು ಮುಚ್ಚಿ, ಪ್ರಸ್ತುತ ವಿಳಾಸಕ್ಕೆ ತನ್ನ ಕಛೇರಿಯನ್ನು ಸ್ಥಳಾಂತರಿಸಿದ್ದು, 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಮಾಡುವಂತಹ ಕಾರ್ಯಗಳಿಗೆ ದಿನ ನಿತ್ಯದ ವ್ಯವಹಾರಗಳಿಗೆ ಅವರುಗಳು ಭಾಧ್ಯಸ್ಥರಾಗಿರುತ್ತಾರೆ.

1 ನೇ ಆರೋಪಿ ಕಂಪನಿಯು 2 ಮತ್ತು 3 ನೇ ಆರೋಪಿತರು ಮಾಡುತ್ತಿರುವಂತಹ ಕಾರ್ಯ ಚಟುವಟಿಕೆಗಳಿಂದ ನಡೆಸಲ್ಪಡುತ್ತಿದ್ದು, ಫಿರ್ಯಾದಿಯು 1 ನೇ ಆರೋಪಿ ಕಂಪನಿಯಲ್ಲಿ ಬಂಡವಾಳವನ್ನು ಹೂಡಿಕೆ ಮಾಡಿದ್ದಲ್ಲಿ ಪ್ರತಿ ತಿಂಗಳು ಸಂಬಳವನ್ನು ಪಡೆಯಬಹುದು ಎಂದು 2 ಮತ್ತು 3 ನೇ ಆರೋಪಿತರು ಫಿರ್ಯಾದಿಗೆ ಹೇಳಿದ್ದು, 2 ಮತ್ತು 3 ನೇ ಆರೋಪಿತರ ಮಾತುಗಳನ್ನು ನಂಬಿ ಫಿರ್ಯಾದಿಯು ರೂ. 1,25,000/- ಹಣವನ್ನು 1 ನೇ ಆರೋಪಿ ಕಂಪನಿಯಲ್ಲಿ 2 ಮತ್ತು 3 ನೇ ಆರೋಪಿತರ ಮೂಲಕ ಬಂಡವಾಳವನ್ನು

ಹೂಡಿಕೆ ಮಾಡಿದ್ದು, ಆ ಸಂಬಂಧ 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ದಿನಾಂಕ : 22.06.2012 ರಂದು ಮುಂಬೈನಲ್ಲಿ 'ವಚನ ಬಂಧ ಮನವಿ' (Memorandum of Understanding) ವನ್ನು ಮಾಡಿಕೊಟ್ಟಿರುತ್ತಾರೆ. ಸದರಿ 'ವಚನ ಬಂಧ ಮನವಿ' (Memorandum of Understanding) ಗೆ ಅನುಗುಣವಾಗಿ ಆರೋಪಿತರು ಮೊದಲನೇ ಶೆಡ್ಯೂಲಗನುಗುಣವಾಗಿ ಪ್ರತಿ ತಿಂಗಳು ರೂ.15,000/- ಗಳಂತೆ ಮುಂದಿನ 12 ತಿಂಗಳವರೆಗೆ 'ವಚನ ಬಂಧ ಮನವಿ' (Memorandum of Understanding) ವನ್ನು ಮಾಡಿದ ದಿನಾಂಕದಿಂದ ಮುಂಗಡ ಚೆಕ್ಕಿನ ಮೂಲಕ ಅಥವಾ ನಗದಿನ ಮೂಲಕ ಹಣವನ್ನು ಕೊಡಬೇಕಿದ್ದು, ಸದರಿ 'ವಚನ ಬಂಧ ಮನವಿ' (Memorandum of Understanding) ಯಲ್ಲಿ ಒಪ್ಪಿಕೊಂಡಂತೆ ಸಂಬಳವನ್ನು ಕೊಟ್ಟಿರುವುದಿಲ್ಲ. ಹಲವಾರು ಭಾರಿ ಬಂಡವಾಳ ಹೂಡಿಕೆ ಮಾಡಿದಂತಹ ಹಣವನ್ನು ಫಿರ್ಯಾದಿಯು ವಾಪಾಸ್ಸು ಮಾಡುವಂತೆ ಕೇಳಿದ್ದು, 3 ನೇ ಆರೋಪಿಯು 1 ನೇ ಆರೋಪಿ ಕಂಪನಿಯ ದಿನನಿತ್ಯದ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ ಕಾರಣ, ಆಕ್ಸಿಸ್ ಬ್ಯಾಂಕ್, ವಾಸಿ II ಎ ಪಿ ಎಮ್ ಸಿ, ಎಂ II, ಮುಂಬೈನ ಚೆಕ್ಕನ್ನು 1 ಮತ್ತು 3 ನೇ ಆರೋಪಿತರ ಪರವಾಗಿ ಕಾನೂನು ಬದ್ಧ ಭಾಧ್ಯಸ್ಥತೆಯಿಂದ 3 ನೇ ಆರೋಪಿಯು ಆತನ ಬ್ಯಾಂಕ್ ಖಾತೆಯ ನಿ ಪಿ-1 ರಿಂದ ನಿ ಪಿ-4 ರವರೆಗಿನ ನಾಲ್ಕು ಚೆಕ್ಕುಗಳನ್ನು, ದಿನಾಂಕ: 05.11.2015 ರ ಚೆಕ್ಕ್ ಸಂಖ್ಯೆ: 022704 ರ ರೂ.1,50,000/- ಗಳಿಗೆ, ದಿನಾಂಕ: 05.10.2015 ರ ಚೆಕ್ಕ ಸಂಖ್ಯೆ:035452 ರ ರೂ. 20,000/- ಗಳಿಗೆ, ಚೆಕ್ಕ ಸಂಖ್ಯೆ: 035453 ರೂ. 20,000/-

ಗಳಿಗೆ, ಚೆಕ್ಕ ಸಂಖ್ಯೆ: 035454 ರೂ. 10,000/- ಗಳಿಗೆ ಒಟ್ಟು ನಾಲ್ಕು ಚೆಕ್ಕಗಳನ್ನು ನೀಡಿದ್ದು, ಸದರಿ ನಾಲ್ಕು ಚೆಕ್ಕಗಳನ್ನು ಫಿರ್ಯಾದಿಯು ಆತನ ಬ್ಯಾಂಕ ಖಾತೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ನಿ ಪಿ-5 ರಿಂದ ನಿ ಪಿ-8 ರವರೆಗೆ ದಿನಾಂಕ : 06.11.2015 ರಂದು ಮತ್ತು ದಿನಾಂಕ: 10.05.2015 ರಂದು ಸದರಿ ನಾಲ್ಕು ಚೆಕ್ಕುಗಳು ಆರೋಪಿಯ ಖಾತೆಯು **"Payment Stopped by Drawer", "Account Closed" ಮತ್ತು "ಸಾಕಷ್ಟು ಹಣ ಇರುವುದಿಲ್ಲ"** ಎಂದು ಅನಾಧರಣಗೊಂಡಿರುತ್ತದೆ ಎಂಬ ಷರಗಳೊಂದಿಗೆ ನಾಲ್ಕು ಬ್ಯಾಂಕ್ ಹಿಂಬರಗಳೊಂದಿಗೆ ವಾಪಾಸ್ಸು ಕೊಟ್ಟಿರುತ್ತಾರೆ. ನಿ ಪಿ-9 ರಂತೆ ದಿನಾಂಕ : 05.12.2015 ರಂದು 1 ರಿಂದ 3 ನೇ ಆರೋಪಿತರಿಗೆ ಫಿರ್ಯಾದಿಯು ಆತನ ವಕೀಲರ ಮೂಲಕ ಲಿಖಿತ ನೋಟಿಸ್ಸಗಳನ್ನು ನೀಡಿ, ನಾಲ್ಕು ಚೆಕ್ಕುಗಳು ಅನಾಧರಣಗೊಂಡ ಸಂಗತಿಯನ್ನು ತಿಳಿಸಿದ್ದಲ್ಲದೆ, ನಾಲ್ಕು ಚೆಕ್ಕುಗಳಲ್ಲಿ ನಮೂದು ಮಾಡಿರುವ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದ್ದರೂ 1 ರಿಂದ 3 ನೇ ಆರೋಪಿತರು ಹಣವನ್ನು ಮರು ಪಾವತಿ ಮಾಡಿರುವುದಿಲ್ಲ. ನಿ ಪಿ-13 ರಿಂದ 15 ರವರೆಗೆ ಸದರಿ ಲಿಖಿತ ನೋಟಿಸ್ಸುಗಳು 1 ರಿಂದ 3 ನೇ ಆರೋಪಿತರಿಗೆ ಜಾರಿಯಾಗಿದ್ದು, ನೋಟಿಸ್ಸುಗಳು ಜಾರಿಯಾದ 15 ದಿನಗಳಲ್ಲಿ ಫಿರ್ಯಾದಿಗೆ ಚೆಕ್ಕಿನ ಬಾಬ್ತು ಹಣವನ್ನು ಪಾವತಿ ಮಾಡಲು ತಪ್ಪಿರುತ್ತಾರೆ. ಆದ್ದರಿಂದ ಖಾಸಗಿ ದೂರನ್ನು ಫಿರ್ಯಾದಿಯು 1 ರಿಂದ 3 ನೇ ಆರೋಪಿತರ ವಿರುದ್ದ ದಾಖಲು ಮಾಡಿ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಎಂಬುದಾಗಿರುತ್ತದೆ.

16. **ಇದಕ್ಕೆ ಪ್ರತಿಯಾಗಿ ಆರೋಪಿಯ ಪರ ಪ್ರತಿರಕ್ಷೆ / ಪ್ರತಿವಾದ ವೇನೆಂದರೆ:-**

ದಿನಾಂಕ: 16.11.2018 ರಂದು ಫಿರ್ಯಾದಿಯು ಪಾಟೀ ಸವಾಲಿಗೆ ಒಳಪಟ್ಟಿದ್ದು, ಸದರಿ ದಿನಾಂಕದಂದು ಆರೋಪಿ ಕಂಪನಿಗೆ ಹಣವನ್ನು ತೆಗೆದುಕೊಳ್ಳುವ ಮತ್ತು ಕೊಡುವ ಪರವಾನಿಗೆ ಇರುವುದಿಲ್ಲ. ಆರೋಪಿ ಕಂಪನಿಯು ಕಾನೂನು ಬಾಹಿರವಾಗಿ ಚಟುವಟಿಕೆಗಳನ್ನು ಮಾಡುತ್ತಿರುತ್ತದೆ. ನಿ ಪಿ-16 ವಚನ ಬಂಧ ಮನವಿಯಲ್ಲಿ ಒಂದನೇ ಪುಟದಿಂದ ಆರನೇ ಪುಟದವರೆಗೂ ಯಾವುದೇ ಸಹಿಗಳು ಇರುವುದಿಲ್ಲ. ನಿ ಪಿ-16 ನಾಲ್ಕನೇ ಪುಟದಲ್ಲಿರುವ ನಿ ಪಿ-16 (ಎ), (ಬಿ) ಮತ್ತು (ಸಿ) ಸಹಿಗಳು ನಕಲಿ ಸಹಿಗಳಾಗಿರುತ್ತವೆ. ನಿ ಪಿ-16 ನ್ನು ಎಸ್. ಪಿ. ಡವಲಪರ್ಸ್ ಎಂಬ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ. ಎಸ್. ಪಿ. ಡವಲಪರ್ಸ್ ಎಂದರೆ ಶದಾಬ ಪಾಟೀಲ್ ಡವಲಪರ್ಸ್ ಎಂದು ಆಗಿರುತ್ತದೆ. ಎಸ್. ಪಿ. ಡವಲಪರ್ಸ್ ಹಾಗೂ ಸನದಿ ಡವಲಪರ್ಸ್ ಎರಡು ಕಂಪನಿಗಳು ಬೇರೆ ಬೇರೆ ಕಂಪನಿಗಳಾಗಿರುತ್ತವೆ ಎಂಬ ಸೂಚನೆಯನ್ನು ಸೂಚಿಸಲಾಗಿದ್ದು, ಸದರಿ ಎಲ್ಲಾ ಸೂಚನೆಗಳನ್ನು ಸಾಕ್ಷಿಯು ಒಪ್ಪಿಕೊಂಡಿರುತ್ತಾರೆ.

ಮುಂದುವರೆದು, ನಿ ಪಿ-16 ವಚನ ಬಂಧ ಮನವಿ ಎಸ್. ಪಿ. ಡವಲಪರ್ಸ್ ಕಛೇರಿಯಲ್ಲಿದ್ದು, ಅದನ್ನು ಫಿರ್ಯಾದಿಯು ತೆಗೆದುಕೊಂಡಿರುತ್ತಾರೆ ಎಂಬ ಸೂಚನೆಯನ್ನು ಸೂಚಿಸಿದ್ದು, ಸದರಿ ಸೂಚನೆಯನ್ನು ಫಿರ್ಯಾದಿಯು ಅಲ್ಲಗಳೆದಿರುತ್ತಾರೆ.

ಮುಂದುವರೆದು, ಫಿರ್ಯಾದಿನ ನಾಲ್ಕನೇ ಪ್ಯಾರಾದಲ್ಲಿ ಆರೋಪಿಯು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದು ಉಲ್ಲೇಖವಿದ್ದು, ಆರೋಪಿತರು ಪೂರ್ತಿ ಹಣವನ್ನು ಸಂದಾಯ ಮಾಡಿರುತ್ತಾರೆ. ಆ ಬಗ್ಗೆ ನಮ್ಮಲ್ಲಿ ಪಾವತಿ ದಾಖಲೆ (Voucher) ಗಳು ಇರುತ್ತವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿತರು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ನಿ ಪಿ-16 **ವಚನ ಬಂಧ ಮನವಿ** (MOU) ನ 4 ನೇ ಪುಟದಲ್ಲಿ ಇರುವಂತಹ ಮೊಹರು ಸನದಿ ಎಂಟರಪ್ರೈಸಸನ್ ಮೊಹರು ಆಗಿರುವುದಿಲ್ಲ. ನಿ ಪಿ-16 ಸೃಷ್ಠಿ ಮಾಡಿದ ದಾಖಲಾತಿಯಾಗಿರುತ್ತವೆ. ಹಾಗೂ ನಿ ಪಿ-16 (ಎ), 16 (ಬಿ) ಮತ್ತು 16 (ಸಿ) ಗಳಲ್ಲಿ ಮಾಡಲಾಗಿರುವ ಸಹಿಗಳು ನಕಲಿ ಸಹಿಗಳಾಗಿರುತ್ತದೆ ಎಂದು ಸೂಚಿಸಲಾಗಿದ್ದು, ಸದರಿ ಎಲ್ಲಾ ಸೂಚನೆಗಳನ್ನು ಫಿರ್ಯಾದಿಯು ಅಲ್ಲಗಳೆದಿರುತ್ತಾರೆ.

ದಿನಾಂಕ: 24.11.2018 ರಂದು ಪುನಃ ಫಿರ್ಯಾದಿಯು ಪಾಟೀ ಸವಾಲಿಗೆ ಒಳಪಟ್ಟಿದ್ದು, ಸದರಿ ಪಾಟೀ ಸವಾಲಿನಲ್ಲಿ, ಫಿರ್ಯಾದಿಯ ವ್ಯವಹಾರವು ಕಂಪನಿಯೊಡನೆ ನಡೆದಿರುತ್ತದೆ. **ಸಚಿನ್** ಎನ್ನುವವರ ಮಾತನ್ನು ಕೇಳಿ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಫಿರ್ಯಾದನ್ನು ದಾಖಲು ಮಾಡಲಾಗಿರುತ್ತದೆ ಎಂದು ಸೂಚಿಸಲಾಗಿದ್ದು, ಸದರಿ ಸೂಚನೆಗಳನ್ನು ಸಾಕ್ಷಿಯು ಅಲ್ಲಗಳೆದಿರುತ್ತಾರೆ.

ಮುಂದುವರೆದು, ನಿ ಪಿ-2 ರಲ್ಲಿರುವಂತಹ ಹೆಸರು ಮತ್ತು ಮೊತ್ತವು ಚಿಕ್ಕ ಮತ್ತು ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿರುತ್ತದೆ. ನಿ ಪಿ-2 (ಎ) ಮತ್ತು ನಿ ಪಿ-3(ಎ) ಬೇರೆ ಬೇರೆ ಸಹಿಗಳಾಗಿರುತ್ತವೆ.

ಆರೋಪಿತರು ಎಲ್ಲಾ ಹಣವನ್ನು ಕೊಟ್ಟ ನಂತರ ಅವರ ಖಾತೆಯನ್ನು ಅವರು ಮುಚ್ಚಿರುತ್ತಾರೆ. ಮುಂದುವರೆದು, 2015 ನೇ ಸಾಲಿನಲ್ಲಿ ಫಿರ್ಯಾದಿಗೆ ಚೆಕ್ಕುಗಳು ಸಿಕ್ಕಿದ್ದು, ಅವುಗಳನ್ನು ದುರುಪಯೋಗ ಪಡಿಸಿಕೊಂಡು ಫಿರ್ಯಾದಿಯು ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದನ್ನು ದಾಖಲು ಮಾಡಿರುತ್ತಾರೆ. ಕಾರಣ ಸದರಿ ಫಿರ್ಯಾದನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

15. ಪ್ರಸ್ತುತ ಚರ್ಚಿಸಿರುವ ವಿಷಯದ ಬಗ್ಗೆ ವಿವರಿಸುವ ಮೊದಲು ಸಂಬಂಧಪಟ್ಟ ಕಾನೂನಿನ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿರುತ್ತದೆ. ಅಂದರೆ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರ ಅನ್ವಯ :-

(i) ಆಪಾದಿತನು ತಾನು ನಿರ್ವಹಣೆ ಮಾಡುತ್ತಿರುವ ಬ್ಯಾಂಕ್ ಖಾತೆಯ ಚೆಕ್ಕನ್ನು ನೀಡಿರುತ್ತಾರೆ.

(ii) ಹೀಗೆ ನೀಡಲಾದಂತಹ ಚೆಕ್ಕು ಆರೋಪಿತನು ತಮ್ಮ ಮೇಲಿರುವ ಕಾನೂನು ಬದ್ಧವಾಗಿ ಸಾಲ ಅಥವಾ ಹೊಣೆಗಾರಿಕೆಯನ್ನು ಭಾಗಶ: ಅಥವಾ ಪೂರ್ತಿಯಾಗಿ ತೀರುವಳಿ ಮಾಡುವ ಉದ್ದೇಶದಿಂದ ನೀಡಿರುತ್ತಾರೆ.

(iii) ಚೆಕ್ಕನ್ನು ಬರೆದ ಮೂರು ತಿಂಗಳ ಒಳಗೆ ಅಥವಾ ಅದರ ಮಾನ್ಯತಾವಧಿಯೊಳಗೆ ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರುಪಡಿಸಲಾಗಿತ್ತು.

(iv) ಇಂತಹ ಸಂದರ್ಭದಲ್ಲಿ ಬ್ಯಾಂಕ್ ಪಾವತಿಗೆ ನಿರಾಕರಿಸಿದರೆ ಅಥವಾ ಚೆಕ್ಕನ್ನು ಹಿಂತೆರುಗಿಸಲ್ಪಟ್ಟಿದ್ದರೆ,

(v) ಸಂದಾರ್ಭಾನುಸಾರ, ಧನಾದೇಶಿಯಾಗಲಿ, ಧಾರಕನಾಗಲಿ ಮುಂದಿನ ದಿನಗಳಲ್ಲಿ ನಿಗದಿತ ಮೊಬಲಗನ್ನು ಪಾವತಿಸುವಂತೆ ಚೆಕ್ಕನ್ನು ಕೊಟ್ಟಂತಹ ವ್ಯಕ್ತಿಗೆ ಒತ್ತಾಯಿಸಿದ್ದು, ಧನಾಧೇಶಕನಿಗೆ ಚೆಕ್ಕ್ ಪಾವತಿಯಾಗಿಲ್ಲವೆಂದು ಬ್ಯಾಂಕ್ ಕಳುಹಿಸಿದ ಮಾಹಿತಿಯನ್ನು ಸ್ವೀಕರಿಸಿದ 30 ದಿನಗಳೊಳಗೆ ಹಣಪಾವತಿಸಬೇಕೆಂದು ತಿಳಿಸಿದ್ದು,

(vi) ಸಂದರ್ಭಾನುಸಾರ ಧಾರಕನು ಮುಂದಿನ ದಿನಗಳಲ್ಲಿ ಹಣ ಪಾವತಿಗೆ ಒತ್ತಾಯಿಸಿ ನೋಟಿಸ್ಸು ಜಾರಿಮಾಡಿದ್ದು, ಸದರಿ ನೋಟಿಸನ್ನು ಪಡೆದ 15 ದಿನಗಳ ಒಳಗೆ ಆ ಚೆಕ್ಕ್ ಕೊಟ್ಟವನು ಹಣವನ್ನು ತುಂಬಲು ತಪ್ಪಿದರೆ ಅಥವಾ ವಿಫಲನಾದರೆ,

ಈ ಕಾಯ್ದೆ ಎರಡು ಪೂರ್ವಭಾವನೆಗಳನ್ನು ಚೆಕ್ಕನ್ನು ಪಡೆದವನ ಪರವಾಗಿ ತಿಳಿಸುತ್ತದೆ. ಮೊದಲನೆಯದಾಗಿ ಕಲಂ 118 (ಎ) ಅಡಿಯಲ್ಲಿ ಪ್ರತಿಫಲದ ಸಂದಾಯದ

ಬಗ್ಗೆ ಕುರಿತಂತೆ, ಎರಡನೆಯದಾಗಿ 139 ನೇ ಕಲಂನ ಅನ್ವಯ ಧಾರಕನು ಅನ್ಯಥಾ ಸಾಬೀತಾಗುವವರೆಗೆ, ಚೆಕ್ಕನ ಧಾರಕನು ಪೂರ್ತಿಯಾಗಿ ಅಥವಾ ಭಾಗಶ: ಅಥವಾ ಸಾಲದ ಅಥವಾ ಇತರೆ ಹೊಣೆಗಾರಿಕೆಯ ತೀರುವಳಿಯ ಪ್ರತಿಫಲದ ಪಾವತಿಯಾಗುವ ಮೊಬಲಗಿನ ಹಣವನ್ನು ಪಡೆದಿರುತ್ತಾನೆ ಎಂಬುದಾಗಿದೆ.

16. ಆದರೆ, ಈ ಪೂರ್ವಭಾವನೆಯು ಖಂಡಿಸಬಹುದಾದ ಪೂರ್ವಭಾವನೆಯಾಗಿದ್ದು, 1 ರಿಂದ 3 ನೇ ಆರೋಪಿತರು ಅವರ ಮೇಲಿನ ಸಾಲ ಅಥವಾ ಹೊಣೆಗಾರಿಕೆಯ ಪ್ರತಿಫಲಕ್ಕಾಗಿ 3 ನೇ ಆರೋಪಿಯು ನಿ ಪಿ-1 ರಿಂದ 4 ರವರೆಗಿನ ವಿವಾದಿತ ಚೆಕ್ಕುಗಳನ್ನು ಕೊಟ್ಟಿರುವುದಿಲ್ಲ ಎಂದು ರುಜುವಾತು ಪಡಿಸುವ ಮೂಲಕ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 118 ಮತ್ತು 139 ರಲ್ಲಿ ಉಪಬಂದಿಸಲಾಗಿರುವ ಪೂರ್ವಭಾವನೆಯನ್ನು ಖಂಡಿಸಬಹುದಾಗಿರುತ್ತದೆ. ಈ ಎರಡು ಕಲಂಗಳಲ್ಲಿ ಉಪಬಂದಿಸಲಾಗಿರುವ ಪೂರ್ವಭಾವನೆಯು ಖಂಡಿಸಬಹುದಾದ ಸ್ವರೂಪದ ಪೂರ್ವಭಾವನೆಯಾಗಿರುತ್ತದೆ.

**ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 118 ರ ಉಪಬಂಧವು ಈ ಕೆಳಗಿನಂತೆ ಉಲ್ಲೇಖಿತವಾಗಿರುತ್ತದೆ:-**

> “**118. ವರ್ಗಾವಣೀಯ ಲಿಖಿತ ಪತ್ರಗಳನ್ನು ಕುರಿತ ಪೂರ್ವಭಾವನೆ:-** ವ್ಯತಿರಿಕ್ತವಾಗಿ ನಿರೂಪಿಸಲ್ಪಟ್ಟ ಹೊರತು, ಕೆಳಗಿನ ಪೂರ್ವಭಾವನೆ / ಪೂರ್ವಚಿಂತನೆಗಳನ್ನು ಹೊಂದಬಹುದು:-

**(ಎ) ಪ್ರತಿಫಲ ಕುರಿತಂತೆ:-**

ಪ್ರತಿಯೊಂದು ವರ್ಗಾವಣೀಯ ಲಿಖಿತ ಪತ್ರವೂ ಪ್ರತಿಫಲಕ್ಕಾಗಿ ಬರೆಯಲ್ಪಟ್ಟುದು. ಅಂತಹ ಪ್ರತಿಯೊಂದು ಪತ್ರವೂ ಸ್ವೀಕೃತವಾದಾಗ, ಹಿಂಬರಹಕ್ಕೆ ಒಳಪಟ್ಟಾಗ, ವರ್ಗಾವಣೆಯ ಮಾತುಕತೆಯಾದಾಗ, ವರ್ಗಾವಣೆಯಾದಾಗ ಪ್ರತಿಫಲಕ್ಕಾಗಿ ಅಂಗೀಕೃತವಾಗಿ, ಹಿಂಬರೆಯಲ್ಪಟ್ಟು, ವರ್ಗಾವಣೀಯವಾಗಿ, ವರ್ಗಾವಣೆಗೆ ಒಳಪಟ್ಟಿರುತ್ತದೆ."

**ವರ್ಗಾವಣೀಯ ಲಿಖಿತ ಪತ್ರಗಳ ಕಲಂ 139 ರ ಉಪಬಂಧವು ಈ ಕೆಳಗಿನಂತೆ ಉಲ್ಲೇಖಿತವಾಗಿರುತ್ತದೆ.**

**ಧಾರಕನ ಪರವಾಗಿ ಪೂರ್ವಭಾವನೆ :-**

"ಅನ್ಯಥಾ ಸಾಬೀತಾಗುವವರೆಗೆ, ಚೆಕ್ಕನ ಧಾರಕ, 138 ನೇ ಕಲಮಿನ್ವಯ ಪೂರ್ತಿಯಾಗಿ ಅಥವಾ ಭಾಗಶ: ಅಥವಾ ಸಾಲ ಅಥವಾ ಇತರೆ ಹೊಣೆಗಾರಿಕೆಗೆ ಪಾವತಿಯಾಗುವ ಮೊಬಲಗಿನ ಹಣವನ್ನು ಪಡೆದಿರುತ್ತಾನೆ ಎಂಬುದಾಗಿರುತ್ತದೆ."

17. ಫಿರ್ಯಾದಿಯು ಆತನು ಫಿರ್ಯಾದಿನಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸುವ ಸಲುವಾಗಿ ತನ್ನನ್ನು ತಾನು ಪಿ.ಡಬ್ಲ್ಯೂ-1 ವಿಚಾರಣೆಗೆ ಒಳಪಟ್ಟು,

ಆತನ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು, ಸದರಿ ಶಪಥ ಪತ್ರದಲ್ಲಿ ಹೇಳಿರುವ ಅಂಶಗಳನ್ನು ಪುನರುಚ್ಚರಿಸುತ್ತಾರೆ. ಪಿ.ಡಬ್ಲ್ಯೂ-1 ರವರು ಆತನು ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಶಾನೆ.ಪಿ-1 ರಿಂದ ನಿಶಾನೆ.ಪಿ-16 (ಸಿ) ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ಸದರಿ ಅಂಶವನ್ನು ರುಜುವಾತು ಪಡಿಸಲು ಫಿರ್ಯಾದಿಯು,1 ರಿಂದ 3 ನೇ ಆರೋಪಿತರ ಪರವಾಗಿ, 3 ನೇ ಆರೋಪಿಯು ನೀಡಿದ ನಾಲ್ಕು ಚೆಕ್ಕುಗಳು, ನಾಲ್ಕು ಬ್ಯಾಂಕಿನ ಹಿಂಬರಹಗಳು, ಲಿಖಿತ ನೋಟಿಸ್ಸು, ಅಂಚೆ ರಶೀದಿಗಳು, ಅಂಚೆ ಸ್ವೀಕೃತಿಗಳು, ವಚನ ಬಂಧ ಮನವಿ (MOU) ಹಾಗೂ ಇತರೆ ದಾಖಲಾತಿಗಳನ್ನು ಹಾಜರು ಪಡಿಸಿದ್ದು ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರೀಶೀಲಿಸಿದಾಗ ಮೇಲ್ನೋಟಕ್ಕೆ ಫಿರ್ಯಾದಿಯು ನಿಗದಿತ ಅವಧಿಯೊಳಗೆ ವಿವಾದಿತ ನಿ ಪಿ-1 ರಿಂದ 4 ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರು ಪಡಿಸಿರುವುದಾಗಿ ಹಾಗೂ ಫಿರ್ಯಾದನ್ನು ನಿಗದಿತ ಸಮಯಕ್ಕೆ ದಾಖಲಿಸಿರುತ್ತಾರೆ ಎಂಬುದು ಸಾಬೀತಾಗುತ್ತದೆ. ಈ ಕಾರಣದಿಂದ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 139 ರ ಅಡಿಯಲ್ಲಿ ಪ್ರಾಥಮಿಕ ಪೂರ್ವಭಾವನೆಯ ಅನ್ವಯ 1 ರಿಂದ 3 ನೇ ಆರೋಪಿತರ ಪರವಾಗಿ, 3 ನೇ ಆರೋಪಿಯು ಹೊಣೆಗಾರಿಕೆಯನ್ನು ಪೂರ್ಣಗೊಳಿಸುವ ಸಲುವಾಗಿ ಸದರಿ ನಾಲ್ಕು ಚೆಕ್ಕುಗಳನ್ನು ನೀಡಿರುತ್ತಾರೆ ಎನ್ನುವ ಅಂಶ ಸ್ಪಷ್ಟವಾಗುತ್ತದೆ. ಕಾರಣ ಫಿರ್ಯಾದಿಯು ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 118 ಮತ್ತು 139 ರ ಅಡಿಯಲ್ಲಿರುವ ಪೂರ್ವಭಾವನೆಯನ್ನು ಸಾಭೀತುಪಡಿಸುವಲ್ಲಿ ಸಫಲರಾಗಿರುತ್ತಾರೆ.

18. ಪ್ರಸ್ತುತ ಪ್ರಕರಣದಲ್ಲಿ ನಿ ಪಿ-2(ಎ) ಮತ್ತು ನಿ ಪಿ-3 (ಎ) ಬೇರೆ ಬೇರೆ ಸಹಿಗಳಾಗಿರುತ್ತವೆ ಎಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದು, ಮುಂದುವರೆದು, ನಿ ಪಿ-2 (ಎ) ಯಾರು ಸಹಿಯನ್ನು ಮಾಡಿರುತ್ತಾರೆ ಎಂದು ಫಿರ್ಯಾದಿಗೆ ಗೊತ್ತಿರುವುದಿಲ್ಲ ಎಂಬ ಸೂಚನೆಯನ್ನು ತೆಗೆದುಕೊಂಡಿರುತ್ತಾರೆ. ಆದರೆ ನಿ ಪಿ-1(ಎ), ನಿ ಪಿ-2(ಎ) , ನಿ ಪಿ-3(ಎ) ಮತ್ತು ನಿ ಪಿ-4 (ಎ) 3 ನೇ ಆರೋಪಿಯ ಸಹಿಯಾಗಿರುವುದಿಲ್ಲವೆಂದು ಅಲ್ಲಗಳೆದಿರುವುದಿಲ್ಲ.

19. ಮಾನ್ಯ ಅಪೆಕ್ಸ ನ್ಯಾಯಾಲಯವು **ರಂಗಪ್ಪ ವಿರುಧ್ಧ ಮೋಹನ್ (ಎ. ಐ. ಆರ್. 2010 ಎಸ್. ಸಿ. 1898)** ಪ್ರಕರಣದಲ್ಲಿ ನೀಡಿರುವ ತೀರ್ಪಿನ ಪ್ರಕಾರ

> *" Once the cheque relates to the account of the accused and he excepts and admits the signatures on the said cheque, then initial presumption as contemplated Under Sec 139 of the Negotiable Instrument Act has to be raised by the court in favour of the complainant".*

ಮಾನ್ಯ ಅಪೆಕ್ಸ ನ್ಯಾಯಾಲಯದ ಮೇಲೆ ಉಲ್ಲೇಖಿಸಲಾದ ತೀರ್ಪಿನ ಪ್ರಕಾರ - ನಿ ಪಿ-1 ರಿಂದ 4 ರವರೆಗಿನ ಚೆಕ್ಕುಗಳು 3 ನೇ ಆರೋಪಿಯ ಖಾತೆಗೆ ಸಂಬಂದಪಟ್ಟಿದ್ದು, ಹಾಗೂ ಅವುಗಳಲ್ಲಿರುವ ಸಹಿಗಳನ್ನು 3 ನೇ ಆರೋಪಿಯು ಆತನ ಸಹಿಗಳಾಗಿರುವುದಿಲ್ಲ ಎಂದು ಅಲ್ಲಗಳೆಯದ ಕಾರಣ, ವರ್ಗಾವಣೆಯ ಲಿಖಿತ ಪತ್ರಗಳ ಅಧಿನಿಯಮ ಕಲಂ 139 ರ ಪ್ರಕಾರ ನ್ಯಾಯಾಲಯವು ನಿಶಾನೆ.ಪಿ-1 ರಿಂದ 4 ರವರೆಗೆ ಚೆಕ್ಕುಗಳನ್ನು 3 ನೇ

ಆರೋಪಿಯು 1 ಮತ್ತು 2 ನೇ ಆರೋಪಿತರ ಪರವಾಗಿ ಪೂರ್ತಿಯಾಗಿ ಅಥವಾ ಭಾಗಶಃ ಅಥವಾ ಸಾಲದ ಅಥವಾ ಇತರೆ ಹೊಣೆಗಾರಿಕೆಯ ತೀರುವಳಿಯ ಪ್ರತಿಫಲಕ್ಕೆ ಕೊಟ್ಟಿರುವುದಾಗಿ ಪೂರ್ವಭಾವನೆಯನ್ನು ತಳೆಯುತ್ತದೆ.

**20. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ತೆಗೆದುಕೊಂಡಿರುವಂತಹ ಪ್ರತಿರಕ್ಷೆಗಳು ಈ ಕೆಳಕಂಡಂತೆ ಇರುತ್ತವೆ:-**

**1) ಆರೋಪಿಯ ಪರ ಮೊದಲನೇ ಪ್ರತಿ ರಕ್ಷೆಯೆಂದರೆ, ಆರೋಪಿತರು ಫಿರ್ಯಾದಿಗೆ ಹಣವನ್ನು ಪೂರ್ತಿಯಾಗಿ ಮರುಪಾವತಿ ಮಾಡಿದ ನಂತರ ಅವರ ಬ್ಯಾಂಕ್ ಖಾತೆಯನ್ನು ಮುಚ್ಚಿರುತ್ತಾರೆ ಎಂಬುದಾಗಿರುತ್ತದೆ:-**

ದಿನಾಂಕ: 24.11.2018 ರ ಪಾಟೀ ಸವಾಲಿನಲ್ಲಿ ಆರೋಪಿತರು ಸದರಿ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

ಸದರಿ ಪ್ರತಿರಕ್ಷೆಗೆ ಸಂಬಂಧಪಟ್ಟಂತೆ 2 ಮತ್ತು 3 ನೇ ಆರೋಪಿತರು ನಗದಿನ ಮೂಲಕವೊ ಅಥವಾ ಚೆಕ್ಕಿನ ಮೂಲಕವೊ ಅಥವಾ ಡಿ ಡಿ ಮೂಲಕವೋ ಅಥವಾ ಆರ್ ಟಿ ಜಿ ಎಸ್ ಮೂಲಕವೊ ಅಥವಾ ನೆಫ್ಟ ಮೂಲಕವೊ ಈ ರೀತಿಯಾಗಿ ಯಾವುದರ ಮೂಲಕ ಹಣವನ್ನು ಫಿರ್ಯಾದಿಗೆ ಮರುಪಾವತಿ ಮಾಡಿರುತ್ತಾರೆ ಎಂಬುವುದಕ್ಕೆ ಸಂಬಂಧಟ್ಪಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಮುಂದುವರೆದು, ದಿನಾಂಕ: 16.11.2018 ರ ಫಿರ್ಯಾದಿಯ ಪಾಟೀ ಸವಾಲಿನಲ್ಲಿ ಆರೋಪಿತರು ***'"ಫಿರ್ಯಾದಿನ ನಾಲ್ಕನೇ ಪ್ಯಾರದಲ್ಲಿ ಆರೋಪಿತರು***

***ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂಬ ಉಲ್ಲೇಖವಿದ್ದು, ಸದರಿಯವರು ಪೂರ್ತಿ ಹಣವನ್ನು ಸಂದಾಯ ಮಾಡಿರುತ್ತಾರೆ ಹಾಗೂ ಆ ಬಗ್ಗೆ ನಮ್ಮಲ್ಲಿ ವೋಚರ ಗಳು ಇರುತ್ತವೆ''.*** ಎಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದು, ಅವರೇ ಹೇಳುವಂತೆ ಫಿರ್ಯಾದಿಗೆ ಹಣವನ್ನು ಮರುಪಾವತಿ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ವೋಚರಗಳಿದ್ದು, ಏಕೆ ಸದರಿ ವೋಚರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂಬ ವಿಷಯವು ಆಶ್ಚರ್ಯದಾಯಕವಾಗಿರುತ್ತದೆ.

ಮೇಲಾಗಿ ನಿ ಪಿ-9 ಲಿಖಿತ ನೋಟಿಸ್ಸು, ನಿ ಪಿ-13, 14 ಮತ್ತು ನಿ ಪಿ-15 ರಂತೆ 1 ರಿಂದ 3ನೇ ಆರೋಪಿತರಿಗೆ ಜಾರಿಯಾದ ನಂತರವಾದರೂ ಅವರು ಫಿರ್ಯಾದಿಗೆ ಪೂರ್ತಿ ಹಣವನ್ನು ಕೊಟ್ಟ ಬಗ್ಗೆ ಪ್ರತ್ಯುತ್ತರವನ್ನು ಕೊಡಬಹುದಿತ್ತು. ಆದರೆ ಏಕೆ ಕೊಡದೇ ಸುಮ್ಮನಿರುತ್ತಾರೆಂದು ಅವರೇ ವಿವರಿಸಿ ಹೇಳಬೇಕಾಗಿರುತ್ತದೆ. ಮುಂದುವರೆದು ಆರೋಪಿತರೇ ಹೇಳುವಂತೆ ಫಿರ್ಯಾದಿಗೆ ಹಣವನ್ನು ಕೊಟ್ಟ ನಂತರ ಅವರ ಬ್ಯಾಂಕ್ ಖಾತೆಯನ್ನು ಮುಚ್ಚಿರುವಾಗ, ಫಿರ್ಯಾದಿಗೆ ಹಣವನ್ನು ಕೊಟ್ಟ ನಂತರವೇ ಖಾತೆಯನ್ನು ಮುಚ್ಚಲಾಗಿದೆ ಎಂದು ರುಜುವಾತು ಪಡಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕೇವಲ ಮೌಖಿಕವಾಗಿ ಆರೋಪಿತರು ಫಿರ್ಯಾದಿಗೆ ಪೂರ್ತಿ ಹಣವನ್ನು ಮರುಪಾವತಿ ಮಾಡಿರುತ್ತಾರೆ ಎಂಬ ಪ್ರತಿರಕ್ಷೆಯನ್ನು ತೆಗೆದುಕೊಂಡರೆ ಸಾಲದು ಅದನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ಅವರ ಮೇಲೆಯೇ ಇರುತ್ತದೆ.

ಕಾರಣ ಸದರಿ ಪ್ರತಿರಕ್ಷೆಯನ್ನು ಒಪ್ಪಲು ಸಾಧ್ಯವಿಲ್ಲ.

**2) ಆರೋಪಿತರ ಪರ ಎರಡನೇ ಪ್ರತಿರಕ್ಷೆ ಎಂದರೆ, ನಿ ಪಿ-2 (ಎ) ಮತ್ತು ನಿ ಪಿ-3 (ಎ) ಚೆಕ್ಕಿನ ಮೇಲಿರುವಂತಹ ಸಹಿಗಳು ಬೇರೆ ಬೇರೆಯಾಗಿರುತ್ತವೆ ಎಂಬುದಾಗಿರುತ್ತದೆ:-**

ದಿನಾಂಕ: 24.11.2018 ರ ಪಾಟೀ ಸವಾಲಿನಲ್ಲಿ ಆರೋಪಿತರು ಸದರಿ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

ಆದರೆ ನಿ ಪಿ-2(ಎ) ಮತ್ತು 3(ಎ) ಬೇರೆ ಬೇರೆ ಸಹಿಗಳಾಗಿರುತ್ತವೆ ಎಂದು ರುಜುವಾತು ಪಡಿಸಲು ಯಾವುದೇ ಪ್ರಯತ್ನಗಳನ್ನು ಕೈಗೊಂಡಿರುವುದಿಲ್ಲ. ಆರೋಪಿತರು ಹೇಳುವಂತೆ ನಿ ಪಿ-2(ಎ) ಮತ್ತು 3(ಎ) ಬೇರೆ ಬೇರೆ ಸಹಿಗಳಾಗಿದ್ದಲ್ಲಿ ಸದರಿ ಸಹಿಗಳನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸುವಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 45 ರಡಿಯಲ್ಲಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದಿತ್ತು. ಅಥವಾ ಸಂಬಂಧಪಟ್ಟ 3 ನೇ ಆರೋಪಿತನ ಬ್ಯಾಂಕ್ ಖಾತೆಯಿಂದ ಅವರ ಮಾದರಿ ಸಹಿಯುಳ್ಳ ಅರ್ಜಿಯ ನಮೂನೆಯ ಪ್ರತಿಯನ್ನು ಸಂಬಂಧಪಟ್ಟ ಬ್ಯಾಂಕಿಗೆ ಸಮನ್ ನ್ನು ಮಾಡಿಕೊಳ್ಳುವ ಮೂಲಕ ದಾಖಲಾತಿಗಳನ್ನು ತರಿಸಿಕೊಂಡು ನಿ ಪಿ-2(ಎ) ಮತ್ತು 3(ಎ) ಬೇರೆ ಬೇರೆ ಸಹಿಗಳಾಗಿರುತ್ತವೆ ಎಂದು ರುಜುವಾತು ಪಡಿಸಬಹುದಿತ್ತು. ಆದರೆ ಈ ಯಾವುದೇ ಪ್ರಯತ್ನಗಳನ್ನು 3 ನೇ ಆರೋಪಿಯು ಕೈಗೊಂಡಿರುವುದಿಲ್ಲ. ಕೇವಲ ನಿ ಪಿ-2(ಎ) ಮತ್ತು 3(ಎ) ಬೇರೆ ಬೇರೆ ಸಹಿಗಳಾಗಿರುತ್ತವೆ ಎಂಬ ಮೌಖಿಕ ಪ್ರತಿರಕ್ಷೆಯು ಸಾಭೀತಾಗುವುದಿಲ್ಲ.

ಮೇಲಾಗಿ ದಿನಾಂಕ; 24.11.2018 ರ ಪಾಟೀ ಸವಾಲಿನಲ್ಲಿ ಫಿರ್ಯಾದಿಯು ***"ನಿ ಪಿ-2(ಎ) ಯಾರು ಸಹಿ ಮಾಡಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯು ಸಹಿಯನ್ನು ಮಾಡಿರುತ್ತಾರೆ. ನಿ ಪಿ-2 (ಎ) ಮತ್ತು ನಿ ಪಿ-3 (ಎ) ಬೇರೆ ಬೇರೆ ಸಹಿಯಾಗಿರುತ್ತವೆ ಎಂದರೆ ಸಾಕ್ಷಿಯು ಒಂದೇ ಸಹಿಯಾಗಿರುತ್ತವೆ ಎಂದು ನುಡಿಯುತ್ತಾರೆ".*** ಎಂದು ಸಾಕ್ಷ್ಯವನ್ನು ನುಡಿದಿದ್ದು, ನಿ ಪಿ-2(ಎ) ಮತ್ತು ನಿ ಪಿ-3(ಎ) ಆರೋಪಿಯ ಸಹಿಯಾಗಿರುತ್ತದೆಂದು ಫಿರ್ಯಾದಿಯು ಸಾಕ್ಷ್ಯವನ್ನು ನುಡಿದಿದ್ದರೂ, ಸದರಿ ಸಹಿಗಳು ಆರೋಪಿಯ ಸಹಿಗಳಾಗಿರುವುದಿಲ್ಲ ಎಂದು ರುಜುವಾತು ಪಡಿಸಲು ಆರೋಪಿತರು ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವುದು ಆಶ್ಚರ್ಯದಾಯಕವಾದ ವಿಷಯವಾಗಿರುತ್ತದೆ. ಕಾರಣ ಸದರಿ ಪ್ರತಿರಕ್ಷೆಯನ್ನು ಒಪ್ಪಲು ಸಾಧ್ಯವಿಲ್ಲ.

**3) ಆರೋಪಿತರ ಪರ ಮೂರನೇ ಪ್ರತಿರಕ್ಷೆ ಎಂದರೆ, 2015 ನೇ ಸಾಲಿನಲ್ಲಿ ಫಿರ್ಯಾದಿಗೆ ಸಿಕ್ಕಂತಹ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಫಿರ್ಯಾದಿಯು ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದನ್ನು ದಾಖಲು ಮಾಡಿರುತ್ತಾರೆ ಎಂಬುದಾಗಿರುತ್ತದೆ:-**

ದಿನಾಂಕ: 24.11.2018 ರಂದು ಆರೋಪಿತರು ಸದರಿ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

ಸದರಿ ಪ್ರತಿರಕ್ಷೆಗೆ ಸಂಬಂಧಪಟ್ಟಂತೆ 2015 ನೇ ಸಾಲಿನಲ್ಲಿ ಫಿರ್ಯಾದಿಗೆ ಆರೋಪಿತರ ಚೆಕ್ಕುಗಳು ಹೇಗೆ ಸಿಕ್ಕಿದವು ಎಂಬ ಅಂಶವನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ಅವರ ಮೇಲೆಯೇ ಇರುತ್ತದೆ. ಕೇವಲ 2015 ನೇ ಸಾಲಿನಲ್ಲಿ ಸಿಕ್ಕಂತಹ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಫಿರ್ಯಾದಿಯು ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದನ್ನು ದಾಖಲು ಮಾಡಿರುತ್ತಾರೆ ಎಂದು ಮೌಖಿಕವಾಗಿ ಪ್ರತಿರಕ್ಷೆಯನ್ನು ತೆಗೆದುಕೊಂಡರೆ ಸಾಲದು. ಮುಂದುವರೆದು 2015 ನೇ ಸಾಲಿನಲ್ಲಿ ಫಿರ್ಯಾದಿಗೆ ಆರೋಪಿಯ ಚೆಕ್ಕುಗಳು ಸಿಕ್ಕಿರುತ್ತವೆ ಎಂದು ತಿಳಿದಿದ್ದರೂ, ಆರೋಪಿತರು ಏಕೆ ಫಿರ್ಯಾದಿಯ ವಿರುದ್ಧ ಇದೂವರೆಗೂ ಯಾವುದೇ ಕಾನೂನು ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ ಎಂದು ಅವರೇ ಹೇಳಬೇಕಾಗಿರುತ್ತದೆ. ಕೇವಲ ಮೌಖಿಕವಾಗಿ ಪ್ರತಿರಕ್ಷೆಯನ್ನು ತೆಗೆದುಕೊಂಡರೆ ಸಾಲದು. ಅದನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು ಆತನ ಮೇಲೆಯೇ ಇರುತ್ತದೆ. ಕಾರಣ ಸದರಿ ಪ್ರತಿರಕ್ಷೆಯನ್ನು ಒಪ್ಪಲು ಸಾಧ್ಯವಿರುವುದಿಲ್ಲ.

**4) ಆರೋಪಿತರ ಪರ ನಾಲ್ಕನೇ ಪ್ರತಿ ರಕ್ಷೆ ಎಂದರೆ, ನಿ ಪಿ-16 ಸೃಷ್ಠಿ ಮಾಡಿದ ದಾಖಲಾತಿಯಾಗಿರುತ್ತದೆ. ಹಾಗೂ ನಿ ಪಿ-16(ಎ), (ಬಿ) ಮತ್ತು (ಸಿ) ನಕಲಿ ಸಹಿಗಳಾಗಿರುತ್ತವೆ ಎಂಬುದಾಗಿರುತ್ತದೆ:-**

ದಿನಾಂಕ: 16.11.2018 ರಂದು ಆರೋಪಿಯು ಸದರಿ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಸದರಿ ಪ್ರತಿರಕ್ಷೆಗೆ ಸಂಬಂಧಪಟ್ಟಂತೆ ಫಿರ್ಯಾದಿಯು ಪಾಟೀ

ಸವಾಲಿನಲ್ಲಿ ಮೌಖಿಕ ಸಾಕ್ಷ್ಯವನ್ನು ಕೊಡುವಂತಹ ಸಮಯದಲ್ಲಿ ನಿ ಪಿ- 16(ಎ), (ಬಿ) ಮತ್ತು (ಸಿ) ನಕಲಿ ಸಹಿಗಳಾಗಿರುತ್ತವೆ ಎಂದರೆ ಸರಿ ಎಂದು ಉತ್ತರಿಸಿದ್ದು, ಅದೇ ದಿನಾಂಕದಂದು ಆರೋಪಿತರ ಪರ ವಕೀಲರು ಫಿರ್ಯಾದಿಯನ್ನು ಪುನಃ ಸದರಿ ಸೂಚನೆಯನ್ನೇ ಕೇಳಿದ್ದು, ಆ ಸಮಯದಲ್ಲಿ ಫಿರ್ಯಾದಿಯು ನಿ ಪಿ- 16(ಎ), (ಬಿ) ಮತ್ತು (ಸಿ) ನಕಲಿ ಸಹಿಗಳಾಗಿರುತ್ತದೆ ಎಂದರೆ ಸರಿಯಲ್ಲ ಎಂಬ ಉತ್ತರವನ್ನು ಕೂಡ ಕೊಟ್ಟಿರುತ್ತಾರೆ. ಈ ರೀತಿಯಾದಂತಹ ಹೇಳಿಕೆಗಳು ಸ್ವೇ-ಅಡಮಿಷನ್ಸ್ ಗಳೆಂದು ಕರೆಯಲಾಗಿದ್ದು, ಕೇವಲ ಈ ಒಂದು ಹೇಳಿಕೆಯಿಂದ ನಿ ಪಿ- 16(ಎ), (ಬಿ) ಮತ್ತು (ಸಿ) ನಕಲಿ ಸಹಿಗಳಾಗಿರುತ್ತವೆ ಎಂಬುದು ರುಜುವಾತಾಗುವುದಿಲ್ಲ. ಹಾಗೂ ನಿ ಪಿ- 16 ಸೃಷ್ಠಿ ಮಾಡಿದ ದಾಖಲಾತಿಯಾಗಿರುತ್ತದೆ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ.

ನಿ ಪಿ-16 ರೂ. 100/- ಛಾಪಾ ಕಾಗದದ ಮೇಲೆ ಮಾಡಲಾದಂತಹ ಮೆಮೊ ಆಫ್ ಅಂಡರಸ್ಟಾಂಡಿಂಗ್ ಆಗಿದ್ದು, ಸದರಿ ಮೆಮೊ ಆಫ್ ಅಂಡರಸ್ಟಾಂಡಿಂಗ್ ದಿನಾಂಕ: 22.06.2012 ನೇ ಸಾಲಿನಲ್ಲಿ ಮೆ|| ಸನದಿ ಎಂಟರ್ ಪ್ರೈಸಸ್ ಲಿ|| ಕಛೇರಿ ಸಂಖ್ಯೆ: 20, ನೆಲ ಮಹಡಿ, ನೀಲಕಂಠ ಅಪಾರ್ಟಮೆಂಟ್, ಸೆಕ್ಟಾರ 3, ನಿವೇಶನ ಸಂಖ್ಯೆ: 9, ಘಾನಸೂಳಿ(W) , ಹೊಸ ಮುಂಬೈ ಇವರು ಹಾಗೂ ಶ್ರೀ ಮೊಹಮ್ಮದ ಅಬ್ದುಲ್ ರಸುಲ್ ಕರೀಮ್ ಮುಲ್ಲಾ ವಿಳಾಸ: ಕರ್ನಾಟಕ, ಬೆಳಗಾವಿ, ಕಂಜಾರ ಗಲ್ಲಿ, ಇವರ ನಡುವೆ ಮಾಡಲಾಗಿದ್ದು, ಸದರಿ MOU ನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿ MOU ಫಿರ್ಯಾದಿಯ ಹಾಗೂ ಆರೋಪಿ ಕಂಪನಿಯ ನಡುವೆ ಮಾಡಲಾಗಿದ್ದು, ಫಿರ್ಯಾದಿಯು

ರೂ. 1,25,000/- ಹಣವನ್ನು ಆರೋಪಿ ಕಂಪನಿಯಾದ ಶ್ರೀ ಸನದಿ ಎಂಟರ್ ಪ್ರೈಸಸ್ ಪ್ರೈವೆಟ್ ಲಿ॥ ನಲ್ಲಿ ಬಂಡವಾಳ ಹೂಡಿಕೆ ಮಾಡಿದ್ದು, ಸದರಿ ಬಂಡವಾಳ ಹೂಡಿಕೆಗೆ 12 ತಿಂಗಳ ಕಾಲಾವಧಿಯವರೆಗೆ ಪ್ರತಿ ತಿಂಗಳು ರೂ. 15,000/- ಗಳಂತೆ ವಚನ ಬಂಧ ಮನವಿ (MOU) ನ್ನು ಮಾಡಿದ ದಿನಾಂಕದಿಂದ ಕೊಡಲು ಭಾಧ್ಯಸ್ಥರಾಗಿದ್ದು, ಮುಂದುವರೆದು, ಮೊದಲನೇ ಭಾಗದ ಹಣದ ಮರುಪಾವತಿ ನಗದಿನ ಮೂಲಕ ಅಥವಾ ಮುಂಗಡ ದಿನಾಂಕವನ್ನು ನಮೂದಿಸಿದಂತಹ ಚೆಕ್ಕುಗಳ (Post Dated Cheque) ಮೂಲಕ ಪರಿಹಾರದ ರೂಪದಲ್ಲಿ 12 ತಿಂಗಳ ಅವಧಿಗಾಗಿ ಹಣವನ್ನು ಕೊಡಲು ಭಾಧ್ಯಸ್ಥರಾಗಿರುವ ಬಗ್ಗೆ ವಚನ ಬಂಧ ಮನವಿ (MOU) ನ್ನು ಮಾಡಿಕೊಡಲಾಗಿದ್ದು, ಒಂದು ವೇಳೆ ಸದರಿ ಚೆಕ್ಕುಗಳು ಅಮಾನ್ಯಗೊಂಡಲ್ಲಿ ಒಂದನೇ ಪಕ್ಷಗಾರರಾದ ವಿರುದ್ಧ ಸದರಿ ವಚನ ಬಂಧ ಮನವಿ (MOU) ಯಲ್ಲಿರುವ ಒಂದನೇ ಪಕ್ಷಗಾರರಾದ ಶ್ರೀ ಸನದಿ ಎಂಟರ್ ಪ್ರೈಸಸ್ ವಿರುದ್ಧ ಎರಡನೇ ಪಕ್ಷಗಾರನಾದಂತಹ ಶ್ರೀ ಅನಸಾರ ಸನದಿ ವಿರುದ್ಧ ಫಿರ್ಯಾದಿಯು ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರಡಿಯಲ್ಲಿ ಪ್ರಕರಣವನ್ನು ದಾಖಲು ಪಡಿಸಬಹುದೆಂದು ಕೂಡ ಸದರಿ ನಿ ಪಿ-16 ರಲ್ಲಿ ಉಲ್ಲೇಖ ಮಾಡಲಾಗಿರುತ್ತದೆ.

ಮುಂದುವರೆದು, ನಿ ಪಿ-16(ಎ) ಸನದಿ ಎಂಟರ್ ಪ್ರೈಸಸ್ ನ ಪ್ರೊಪ್ರೈಟರ್ ರವರ ಸಹಿಯಾಗಿದ್ದು, ನಿ ಪಿ-16(ಬಿ) ಮತ್ತು (ಸಿ) ಎರಡು ಮತ್ತು ಮೂರನೇ ಆರೋಪಿತರ ಸಹಿಗಳಾಗಿರುತ್ತವೆ. ಕೇವಲ ಫಿರ್ಯಾದಿಯು ಪಾಟೀ ಸವಾಲಿನಲ್ಲಿ ನೀಡಿದಂತಹ ಸ್ಟೇ ಅಡಮಿಷನಿಂದ ಮೌಖಿಕವಾಗಿ ನಿ ಪಿ-16(ಬಿ) ಮತ್ತು (ಸಿ) ರಲ್ಲಿರುವಂತಹ ಸಹಿಗಳು ನಕಲಿ

ಸಹಿಗಳಾಗಿರುತ್ತವೆ ಎಂದು ಆರೋಪಿಯು ಪ್ರತಿರಕ್ಷೆಯನ್ನು ತೆಗೆದುಕೊಂಡರೆ ಸಾಲದು ಅದನ್ನು ರುಜುವಾತು ಪಡಿಸುವಂತಹ ಹೊಣೆಗಾರಿಕೆಯು ಆತನ ಮೇಲೆಯೆ ಇರುತ್ತದೆ. ಕಾರಣ ಸದರಿ ನಿ ಪಿ-16 ಸೃಷ್ಠಿ ಮಾಡಿದ ದಾಖಲಾತಿಯಾಗಿದ್ದು, ನಿ ಪಿ-16 (ಎ), 16 (ಬಿ) ಮತ್ತು 16 (ಸಿ) ನಕಲಿ ಸಹಿಗಳಾಗಿರುತ್ತವೆ ಎಂಬ ಪ್ರತಿವಾದವನ್ನು ಒಪ್ಪಲು ಸಾಧ್ಯವಿಲ್ಲ. ಮೇಲಾಗಿ ದಿನಾಂಕ: 16.11.2018 ರ ಪಾಟೀ ಸವಾಲಿನಲ್ಲಿ ಆರೋಪಿತರು ***"ನಿ ಪಿ- 16 ಎಸ್. ಪಿ. ಡೆವಲಪರ್ಸ್ ಕಛೇರಿಯಲ್ಲಿದ್ದು, ಫಿರ್ಯಾದಿಯು ಅದನ್ನು ತೆಗೆದುಕೊಂಡಿರುತ್ತಾರೆ ಎಂಬ*** ಪ್ರತಿರಕ್ಷೆಯನ್ನು ತೆಗೆದುಕೊಂಡಿದ್ದು, ಆರೋಪಿಯು ಹೇಳುವಂತೆ ಫಿರ್ಯಾದಿಯು ನಿ ಪಿ-16 ವಚನ ಬಂಧ ಮನವಿಯನ್ನು ಸೃಷ್ಠಿ ಮಾಡಿ ರಚಿಸಿದ್ದಲ್ಲಿ, ಸದರಿ ದಾಖಲಾತಿಯು ಎಸ್ ಪಿ ಡವಲಪರ್ಸ್ ನ ಕಛೇರಿಯಲ್ಲಿ ಹೇಗೆ ಇರುತ್ತದೆ ಎಂಬ ಸಂಗತಿಯು ಸಂಶಯವನ್ನು ಉಂಟುಮಾಡುತ್ತದೆ. ಕಾರಣ ಸದರಿ ಪ್ರತಿರಕ್ಷೆಯು ರುಜುವಾತಾಗುವುದಿಲ್ಲ.

21. ಫಿರ್ಯಾದಿಯು ಆತನ ಪ್ರಕರಣದ ಪುಷ್ಠಿಕರಣಕ್ಕಾಗಿ ಈ ಕೆಳಕಂಡ ತೀರ್ಪುಗಳನ್ನು ಅನುಸರಿಸಿರುತ್ತಾರೆ: -

***i) (2010) 11 Supreme Court Cases 441***

***Rangappa***

***Vs***

***Mohan***

***ii) 2006 CRI. L. J. 1***

*Gorantla Venkateswara Rao*

*Vs*

*Kolla Veera Raghava Rao and Anr.*

*iii) (2018) 3 Supreme Court Cases (Cri) 584*

*(2018) 8 Supreme Court Cases 469*

*T. P. Murugan (Dead) Vs Bojan Vs Posa Nandhi*

*Vs*

*Bojan*

*iv) (2018) 3 Supreme Court Cases (Cri) 544*

*(2018) 8 Supreme Court Cases 165*

*Kishan Rao*

*Vs*

*Shanakargouda*

*v)Supreme Court 1256*

*Phula Singh*

*Vs*

*State of Himachala Pradesh*

*vi) 2007 CRI. L. J. 583*

*H. Narasimha Rao*

*Vs*

*Venkataram R*

***vii) 2006(5) Kar. L. J. 323***
***In the court of Karnataka At Bangalore***
***S. T. P. Limited, Bangalore***
***Vs***
***Usha Paints and Decorators, Bangalore and another***

22. ಆರೋಪಿಯು ಆತನ ಪ್ರತಿರಕ್ಷೆಯನ್ನು ರುಜುವಾತು ಪಡಿಸಲು ಈ ಕೆಳಕಂಡ ಮಾನ್ಯ ಉಚ್ಛ ನ್ಯಾಯಾಲಯದ ಹಾಗೂ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳನ್ನು ಅನುಸರಿಸಿರುತ್ತಾರೆ:-

***I) 2001 Cri. L. J. 24***
***Kerala High court***
***Sasseriyil Joseph***
***Vs***
***Devassia***
***ii) In the Supreme Court of India***
***Civil Original Jurisdiction***
***Writ Petition (Civil) No. 1001 of 2017***
***Sarvepalli Radhakrishnan University***
***Vs***
***Union of India and Others***

24. ಮೇಲೆ ಚರ್ಚಿಸಿದಂತೆ ಫಿರ್ಯಾದಿಯ ಹಾಗೂ ಆರೋಪಿತರ ಸಾಕ್ಷ್ಯ ವಿಚಾರಣೆಯನ್ನು ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಲಾದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 1 ನೇ ಆರೋಪಿಯ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಫಿರ್ಯಾದಿಯಿಂದ ಬಂಡವಾಳ ಹೂಡಿಕೆಯನ್ನು ಮಾಡಿಸಿಕೊಂಡಿದ್ದು, ಸದರಿ ಬಂಡವಾಳ ಹಣದ ಮರುಪಾವತಿಗಾಗಿ 3 ನೇ ಆರೋಪಿಯು 1 ಮತ್ತು 2 ನೇ ಆರೋಪಿತರ ಪರವಾಗಿ ವಿವಾದಿತ ನಿ ಪಿ-1 ರಿಂದ ನಿ ಪಿ- 4 ಚೆಕ್ಕುಗಳನ್ನು ಫಿರ್ಯಾದಿಗೆ ಕಾನೂನು ಬದ್ಧವಾಗಿ ಕೊಡಬೇಕಾಂತಹ ಪ್ರತಿಫಲದ ತೀರುವಳಿಗಾಗಿ ಕೊಟ್ಟಿರುವುದಿಲ್ಲ ಎಂಬುದನ್ನು ಸಾಭೀತುಪಡಿಸಲು ವಿಫಲರಾಗಿರುತ್ತಾರೆ. ಹಾಗೂ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 118 ಮತ್ತು 139 ರಲ್ಲಿ ಉಲ್ಲೇಖಿಸಲಾಗಿರುವಂತಹ ಪೂರ್ವಭಾವನೆಯನ್ನು ಖಂಡಿಸುವಲ್ಲಿ ವಿಫಲರಾಗಿರುತ್ತಾರೆ.

22. ಮೇಲೆ ಚರ್ಚಿಸಲಾದಂತೆ ಮೌಖಿಕ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಲಾದ ಎಲ್ಲಾ ದಸ್ತಾವೇಜುಗಳ ಸಾಕ್ಷ್ಯವನ್ನು ರುಜುವಾತು ಪಡಿಸುವಲ್ಲಿ ಫಿರ್ಯಾದಿಯು ಸಫಲರಾಗಿದ್ದು, ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ರ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿರುತ್ತಾರೆ. ಫಿರ್ಯಾದಿಯು ಮೇಲೆ ಅನುಸರಿಸುವ ಮಾನ್ಯ ಉಚ್ಛ ನ್ಯಾಯಾಲಯದ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳು ಫಿರ್ಯಾದಿಗೆ ಸದರಿ ಪ್ರಕರಣಕ್ಕೆ ಅನುಕೂಲಕರವಾಗುವಂತಹ ತೀರ್ಪುಗಳಾಗಿದ್ದು,

ಆರೋಪಿಯು ಅನುಸರಿಸಿರುವ ತೀರ್ಪುಗಳು ಸದರಿ ಪ್ರಕರಣಕ್ಕೆ ಅನುಕೂಲಕರವಾಗುವಂತಹ ತೀರ್ಪುಗಳಾಗಿರುವುದಿಲ್ಲ.

23. ನಿಶಾನೆ.ಪಿ-1 ರಿಂದ ನಿ ಪಿ-4 ರವರೆಗಿನ ಚೆಕ್ಕುಗಳು ದಿನಾಂಕ: 05.10.2015 ಮತ್ತು 05.11.2015 ಕ್ಕೆ ನೀಡಲಾಗಿದ್ದು, ದಿನಾಂಕ 07.03.2020 ರವರೆಗೆ ಸುಮಾರು 04 ವರ್ಷ 04 ತಿಂಗಳುಗಳ ಕಾಲ ಪ್ರಕರಣವು ಜಾಲ್ತಿಯಲ್ಲಿರುತ್ತದೆ. ಕಾರಣ, ದಂಡ ಪ್ರಕ್ರಿಯೆ ಕಲಂ 357 ರಡಿಯಲ್ಲಿ ಜುಲ್ಮಾನೆ ಮೊತ್ತದಲ್ಲಿ ಪರಿಹಾರನ್ನು ಪಡೆಯಲು ಫಿರ್ಯಾದಿಯು ಅರ್ಹರಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ ಈ ನ್ಯಾಯಾಲಯವು ಅಂಶ 1 ನ್ನು **'ಸಕಾರಾತ್ಮಕವಾಗಿ'** ಉತ್ತರಿಸುತ್ತದೆ.

24. **ಅಂಶ 2:** ಈ ಮೇಲ್ಕಂಡಂತೆ ಚರ್ಚೆಯ ನಿರ್ಣಯದಿಂದ ಈ ನ್ಯಾಯಾಲಯವು ಈ ಕೆಳಕಂಡಂತೆ ಅಂತಿಮ ಆದೇಶ ಮಾಡಿರುತ್ತದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ **255 (2)** ರ ಅಡಿ ಪ್ರದತ್ತವಾದ ಅಧಿಕಾರದ ಮುಖಾಂತರ 1 ನೇ ಆರೋಪಿ ಕಂಪನಿಯ ವಿರುದ್ಧ ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ ಕಲಂ 138 ರ ಅಡಿಯಲ್ಲಿ ಮಾಡಲಾದ ಆರೋಪಣೆಯು ಸಾಭೀತಾಗಿದ್ದು, ಕಾರಣ 1 ನೇ ಆರೋಪಿ

ಕಂಪನಿಯ ಪರವಾಗಿ 2 ನೇ ಮತ್ತು 3 ನೇ ಆರೋಪಿತರನ್ನು ಸದರಿ ಅಪರಾಧಕ್ಕಾಗಿ ಸಿದ್ಧದೋಷಿಗಳು ಎಂದು ಘೋಷಿಸಿ, 2 ಮತ್ತು 3 ನೇ ಆರೋಪಿತರು 1 ನೇ ಆರೋಪಿ ಕಂಪನಿಯ ಪರವಾಗಿ ರೂ.2,70,000/- ಗಳ ಜುಲ್ಮಾನೆ ಹಣವನ್ನು ಫಿರ್ಯಾದಿಗೆ ಪಾವತಿಸುವಂತೆ ಆದೇಶ ಮಾಡಲಾಗಿರುತ್ತದೆ. ದಂಡವನ್ನು ಪಾವತಿಸಲು 2 ಮತ್ತು 3 ನೇ ಆರೋಪಿತರು ವಿಫಲರಾದ್ದಲ್ಲಿ, 2 ಮತ್ತು 3 ನೇ ಆರೋಪಿತರು ಒಂದು ವರ್ಷ ಆರು ತಿಂಗಳುಗಳ ಸಾಧಾ ಕಾರಾವಾಸ ಶಿಕ್ಷೆಯನ್ನು ಅನುಭವಿಸ ತಕ್ಕದ್ದು.

ಸದರಿ ರೂ.2,70,000/- ಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 357 ರಡಿಯಲ್ಲಿ ರೂ.2,50,000/- ಗಳನ್ನು ಫಿರ್ಯಾದಿಗೆ ಪರಿಹಾರದ ರೂಪದಲ್ಲಿ ಪಾವತಿ ಮಾಡಲು ಆದೇಶಿಸಲಾಗಿದ್ದು, ರೂ.20,000/- ಗಳ ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿರುತ್ತದೆ.

ಮುಂದುವರೆದು ಆದೇಶದಲ್ಲಿ ಆದೇಶಿಸಿರುವ ರೂ. 2,50,000/- ಗಳ ಪರಿಹಾರವನ್ನು 1 ನೇ ಆರೋಪಿ ಕಂಪನಿಯ ಪರವಾಗಿ 2 ಮತ್ತು 3 ನೇ ಆರೋಪಿತರು ಫಿರ್ಯಾದಿಗೆ ಕೊಡಲು ತಪ್ಪಿದ್ದು, ಕಾರಾವಾಸ ಶಿಕ್ಷೆಯನ್ನು ಅನುಭವಿಸಿದರೂ ಕೂಡ, ದಂಡ ಪ್ರಕ್ರಿಯಾ ಸಂಹಿತೆ

ಕಲಂ 421 ರ ಅಡಿಯಲ್ಲಿ 2 ಮತ್ತು 3 ನೇ ಆರೋಪಿತರು ಫಿರ್ಯಾದಿಗೆ ಕೊಡಬೇಕಾದಂತಹ ಪರಿಹಾರ ಹಣವನ್ನು ಕೊಡುವಲ್ಲಿ ವಿಮುಕ್ತರಾಗುವುದಿಲ್ಲ.

2 ಮತ್ತು 3 ನೇ ಆರೋಪಿತರ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದು ಪಡಿಸಿ, ಜಾಮೀನುದಾರನನ್ನು ಜಾಮೀನಿನಿಂದ ವಿಮೋಚನೆ ಮಾಡಲಾಗಿದೆ.

2 ಮತ್ತು 3 ನೇ ಆರೋಪಿತರಿಗೆ ತೀರ್ಪಿನ ದೃಡೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ, ನಂತರ ತಪ್ಪುಗಳನ್ನು ತಿದ್ದಿ, ದಿನಾಂಕ: 07 ನೇ ಮಾರ್ಚ್ 2020 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ಶ್ರೀಮತಿ ಭಾಗ್ಯಲಕ್ಷ್ಮಿ)**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**8 ನೇ ನ್ಯಾಯಾಲಯ, ಬೆಳಗಾವಿ.**

## ಅನುಬಂಧ

**ಫಿರ್ಯಾದಿ ಪರ ವಿಚಾರಿಸಲಾದ ಸಾಕ್ಷಿಗಳ ವಿವರ**

**ಪಿ. ಡಬ್ಲ್ಯೂ.1. : ಶ್ರೀ ಮೊಹಮ್ಮದ ರಸೂಲ್ ಅಬ್ದುಲ್ ಕರೀಮ್ ಮುಲ್ಲಾ.**

**ಆರೋಪಿಯ ಪರ ವಿಚಾರಿಸಲಾದ ಸಾಕ್ಷಿಗಳ ವಿವರ:**

**ಇಲ್ಲಾ**

**ಫಿರ್ಯಾದಿ ಪರ ಗುರುತಿಸಲಾದ ನಿಶಾನೆಗಳ ವಿವರ :**

ನಿಶಾನೆ. -1 ರಿಂದ

ನಿಶಾನೆ.ಪಿ-4 : ಚೆಕ್ಕುಗಳು.

ನಿಶಾನೆ. ಪಿ-1(ಎ)

ರಿಂದ ನಿಶಾನೆ.ಪಿ-4(ಎ) : ನಾಲ್ಕು ಚೆಕ್ಕುಗಳ ಮೇಲಿರುವ ಆರೋಪಿತನ ಸಹಿಗಳು.

ನಿಶಾನೆ.ಪಿ-5 ರಿಂದ

ನಿಶಾನೆ.ಪಿ-8 : ನಾಲ್ಕು ಬ್ಯಾಂಕ ಹಿಂಬರಹಗಳು.

ನಿಶಾನೆ.ಪಿ-9 : ಕಛೇರಿಯ ಲಿಖಿತ ನೋಟಿಸ್ಸಿನ ಪ್ರತಿ.

ನಿಶಾನೆ.ಪಿ-10 ರಿಂದ

| | | |
|---|---|---|
| ನಿಶಾನೆ.ಪಿ-12 | : | ಮೂರು ಅಂಚೆ ರಶೀದಿಗಳು. |
| ನಿಶಾನೆ.ಪಿ-13 ರಿಂದ | | |
| ನಿಶಾನೆ.ಪಿ-15 | : | ಮೂರು ಅಂಚೆ ಸ್ವೀಕೃತಿಗಳು. |
| ನಿಶಾನೆ.ಪಿ-16 | : | ವಚನ ಬಂಧ ಮನವಿ. |
| ನಿಶಾನೆ.ಪಿ-16(ಎ), | | |
| 16 (ಬಿ) ಮತ್ತು 16(ಸಿ) | : | ವಚನ ಬಂಧ ಮನವಿ ಪತ್ರದ ಮೇಲಿರುವ ಸಹಿಗಳು. |

**ಆರೋಪಿಯ ಪರ ಗುರುತಿಸಲಾದ ನಿಶಾನೆಗಳ ವಿವರ:**

ಇಲ್ಲ

**(ಶ್ರೀಮತಿ ಭಾಗ್ಯಲಕ್ಷ್ಮಿ)**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**8 ನೇ ನ್ಯಾಯಾಲಯ, ಬೆಳಗಾವಿ.**